Swabhimani Sahakari

Pages : 32 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ರಜತ ಮಹೋತ್ಸವ 2025

Volume - 22
Issue - 06
June- 2025



ಆಗಲಿ ಇದ್ದರೂ ಆಸೆಗೊಂಡಿರಲು
ಗಿರಿಯೊಳಂತೂ ಇತ್ತು ಕೆಲವೇ
ತಿಂಗಳಲ್ಲಿ ಚಿನ್ನ ಕಡಗ ಮೊಳಕೈಗೆ
ಸರಿದು ಬಂತು ಕಾರಹುಣ್ಣಿಮೆಯ
ಮಾರನೆಯ ದಿನವೇ ಮೋಡ
ಕೋಡನಪ್ಪಿ ಕಂಡಿತೊಡ್ಡಿ
ನೋಡ ಢಿಕ್ಕಿ ಯಾಡುವಾ
ಆನೆ ಬೇಡಗನೊಪ್ಪಿ....
-ದ. ರಾ. ಬೇಂದ್ರೆ

ಜೂನ್ ೦5
ವಿಶ್ವ ಪರಿಸರ ದಿನ

ಧ್ಯೇಯ:
ಪ್ಲಾಸ್ಟಿಕ್ ಮಾಲಿನ್ಯ ಕೊನೆಗಾಣಿಸುವುದು



ಜೂನ್ ೦7
ಬಕ್ರೀದ್



ಜೂನ್ 21
ಅಂತರರಾಷ್ಟ್ರೀಯ ಯೋಗ ದಿನ

ಧ್ಯೇಯ:
ಒಂದು ಭೂಮಿಗಾಗಿ,
ಆರೋಗ್ಯಕ್ಕಾಗಿ ಯೋಗ



ಸೌಹಾರ್ದ ಸಹಕಾರಿಗಳ ಸಂಖ್ಯೆ: 6514

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1733

# ಶಾಸನಾತ್ಮಕ ಹಕ್ಕು-ಕರ್ತವ್ಯ, ಜವಾಬ್ದಾರಿಗಳ ಅರಿವು ಮತ್ತು ಆಚರಣೆಗಾಗಿ ಶಿಕ್ಷಣ ಹಾಗೂ ತರಬೇತಿ



ಜಿ. ನಂಜನಗೌಡ

> ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಸಾಧನೆಯಲ್ಲಿ ಸಂಯುಕ್ತ ಸಹಕಾರಿಯು ವರ್ಷವಿಡೀ ಹಲವಾರು ತರಬೇತಿ ಕಾರ್ಯಕ್ರಮಗಳ ಜೊತೆಗೆ ಸಹಕಾರಿಗಳಗೆ ಶಾಸನಾತ್ಮಕ ಕಾರ್ಯಗಳ ಕುರಿತು ಮಾರ್ಗದರ್ಶನ ನೀಡುತ್ತಾ ಬರುತ್ತಿರುವುದು ತಮಗೆ ತಿಳಿದಿದೆ. ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತಿರುವ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳು ಉತ್ತಮ ಗುಣಮಟ್ಟದ್ದಾಗಿರುತ್ತವೆ. ಉತ್ತಮ ವಿಷಯಗಳ ಆಯ್ಕೆ, ಅನುಭವಿ ಉಪನ್ಯಾಸಕರು ಹಾಗೂ ಉತ್ತಮ ವ್ಯವಸ್ಥೆಗಳಿಂದ ಕೂಡಿರುತ್ತದೆ ಎಂದು ಸಹಕಾರ ಇಲಾಖೆಯ ಅಧಿಕಾರಿಗಳ ಹಾಗೂ ಉಪನ್ಯಾಸಕರುಗಳ ಮತ್ತು ಭಾಗವಹಿಸಿದ ಸಹಕಾರಿ ಪ್ರತಿನಿಧಿಗಳ ಅಭಿಪ್ರಾಯವಾಗಿದೆ.

**ಆತ್ಮೀಯ ಸಹಕಾರಿ ಬಂಧುಗಳಿಗೆ ಹೃದಯಪೂರ್ವಕ ನಮಸ್ಕಾರಗಳು.**

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಸಾಧನೆಯಲ್ಲಿ ಸಂಯುಕ್ತ ಸಹಕಾರಿಯು ವರ್ಷವಿಡೀ ಹಲವಾರು ತರಬೇತಿ ಕಾರ್ಯಕ್ರಮಗಳ ಜೊತೆಗೆ ಸಹಕಾರಿಗಳಿಗೆ ಶಾಸನಾತ್ಮಕ ಕಾರ್ಯಗಳ ಕುರಿತು ಮಾರ್ಗದರ್ಶನ ನೀಡುತ್ತಾ ಬರುತ್ತಿರುವುದು ತಮಗೆ ತಿಳಿದಿದೆ. ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತಿರುವ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳು ಉತ್ತಮ ಗುಣಮಟ್ಟದ್ದಾಗಿರುತ್ತವೆ. ಉತ್ತಮ ವಿಷಯಗಳ ಆಯ್ಕೆ, ಅನುಭವಿ ಉಪನ್ಯಾಸಕರು ಹಾಗೂ ಉತ್ತಮ ವ್ಯವಸ್ಥೆಗಳಿಂದ ಕೂಡಿರುತ್ತದೆ ಎಂದು ಸಹಕಾರ ಇಲಾಖೆಯ ಅಧಿಕಾರಿಗಳ ಹಾಗೂ ಉಪನ್ಯಾಸಕರುಗಳ ಮತ್ತು ಭಾಗವಹಿಸಿದ ಸಹಕಾರಿ ಪ್ರತಿನಿಧಿಗಳ ಅಭಿಪ್ರಾಯವಾಗಿದೆ. ಇದು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಸಹಕಾರ ಎಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಹೆಮ್ಮೆಪಡುತ್ತದೆ.

ನಮ್ಮ ದೇಶದ ಸಹಕಾರ ಕ್ಷೇತ್ರ ಬೃಹದಾಕಾರವಾಗಿ ಬೆಳೆದಿದೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರವೂ ವೇಗವಾಗಿ ಬೆಳೆಯುತ್ತಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಈ ಬೆಳವಣಿಗೆಯಲ್ಲಿ ಕೆಲವೇ ಕೆಲವು ಸಹಕಾರಿಗಳು ತಮ್ಮ ಸ್ವಾರ್ಥ ಸಾಧಿಸುವುದಕ್ಕಾಗಿ ಈ ಕ್ಷೇತ್ರವನ್ನು ದುರ್ಬಳಕೆ ಮಾಡಿಕೊಂಡಿರುವುದರಿಂದ ಠೇವಣಿದಾರರಿಗೆ ವಂಚನೆಯಾಗುತ್ತಿರುವುದನ್ನು ಸಂಯುಕ್ತ ಸಹಕಾರಿಯು ಗಮನಿಸಿದೆ. ಇದಕ್ಕೆ ಸೂಕ್ತ ಕ್ರಮಗಳನ್ನು ಸಹ ತೆಗೆದುಕೊಳ್ಳುತ್ತಿದೆ. ಅಂತಹ ಸಹಕಾರಿಗಳು ಇನ್ನು ಮುಂದಿನ ದಿನಗಳಲ್ಲಿ ತಲೆ ಎತ್ತದಂತೆ ಕ್ರಮಗಳನ್ನು ತೆಗೆದುಕೊಳ್ಳುವ ಅವಶ್ಯಕತೆ ಇದೆ. ಸಹಕಾರಿಗಳಿಗೆ ಶಾಸನಾತ್ಮಕ ಹಕ್ಕು, ಕರ್ತವ್ಯ ಹಾಗೂ ಜವಾಬ್ದಾರಿಗಳ ನಿರ್ವಹಣೆ ಬಗ್ಗೆ ಸಹಕಾರ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯ ಮಟ್ಟದಲ್ಲಿ, ಪ್ರಾಂತೀಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಜರುಗಿಸಲಾಗುತ್ತಿದೆ.

ಸಹಕಾರ ಕ್ಷೇತ್ರ ಅತ್ಯಂತ ಕಟ್ಟಕಡೆಯ ವ್ಯಕ್ತಿಗೂ ಮೂಲಭೂತ ಸೌಕರ್ಯಗಳು ಸಿಗುವಂತಹ ಕ್ಷೇತ್ರ. ಜನಸಾಮಾನ್ಯರಿಗೆ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ನೆರವಾಗುವ ಕ್ಷೇತ್ರ ಇದಾಗಿದೆ. ದೇಶದ ಅರ್ಥವ್ಯವಸ್ಥೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತ ಬಂದಿದೆ. ದೇಶದ ಸುಸ್ಥಿರ ಬೆಳವಣಿಗೆಯಲ್ಲಿ ಸಹಕಾರ ಕ್ಷೇತ್ರ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ ಎಂಬುದನ್ನು ಮನಗಂಡ ಕೇಂದ್ರ ಸರಕಾರ, ಕೇಂದ್ರದಲ್ಲಿ ಪ್ರತ್ಯೇಕವಾಗಿ ಸಹಕಾರ ಸಚಿವಾಲಯ ಪ್ರಾರಂಭಿಸಿ ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ವಿಶೇಷವಾಗಿ ದೇಶದಲ್ಲಿ ರಾಷ್ಟ್ರೀಯ ಸಹಕಾರ ನೀತಿ, ಸಹಕಾರ ಕ್ಷೇತ್ರದಲ್ಲಿ ಒಂದು ವಿಶ್ವ ವಿದ್ಯಾಲಯ, ಸಹಕಾರ ಕ್ಷೇತ್ರದಲ್ಲಿ ರಾಷ್ಟ್ರಮಟ್ಟದಲ್ಲಿ ಆಯಾತ-ನಿರ್ಯಾತ ಸಹಕಾರ ಸಂಘ ಸ್ಥಾಪನೆ, ಕೃಷಿ ಪತ್ತಿನ ಸಹಕಾರ ಸಂಘಗಳ ಗಣಕೀಕರಣ ಹೀಗೆ ಹತ್ತು ಹಲವಾರು ವಿಷಯಗಳ ಬಗ್ಗೆ ಕ್ರಮವಿಡುತ್ತಿದೆ.

ವಿಶ್ವ, ರಾಷ್ಟ್ರ ಹಾಗೂ ರಾಜ್ಯ ಮಟ್ಟಗಳಲ್ಲಿ ಸಹಕಾರ ಚಳುವಳಿಯ ಬೆಳವಣಿಗೆ ಮತ್ತು ಸೌಹಾರ್ದ ಸಹಕಾರ ಕ್ಷೇತ್ರಗಳಲ್ಲಿ ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳ ಬಗ್ಗೆ ಸಹಕಾರಿಗಳ ನಿರ್ದೇಶಕರುಗಳು ತಿಳಿದುಕೊಳ್ಳುವುದು ಅವಶ್ಯಕ. ತಮ್ಮ ಜ್ಞಾನದ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು. ಪಾರದರ್ಶಕತೆಯಿಂದ ಆಡಳಿತವನ್ನು ನಿರ್ವಹಿಸಲು ಸಮರ್ಥರಾಗಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ಸೌಹಾರ್ದ ಸಹಕಾರಿಗಳು ಇದಕ್ಕೆ ಸ್ಪಂದಿಸಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ ಸಂತೋಷವಾಗಿದೆ. ತರಬೇತಿ ಕಾರ್ಯಕ್ರಮಗಳ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿಸಲು ನಿಮ್ಮ ಸಲಹೆ, ಮಾರ್ಗದರ್ಶನ ಹಾಗೂ ಸಹಕಾರವನ್ನು ಸಂಯುಕ್ತ ಸಹಕಾರಿಯು ಸ್ವಾಗತಿಸುತ್ತದೆ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

## ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.......... 2
ಸಂಪಾದಕೀಯ.......... 3
ಜ್ಞಾನ ಜ್ಯೋತಿ.......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .......... 05–19
ಸೌಹಾರ್ದ ಸಹಕಾರಿಗಳ ಸಮಾಚಾರಗಳು .......... 22–22
**ಲೇಖನಗಳು :**
ರಾಜ್ಯಮಟ್ಟದ ಸಹಕಾರ ಮಹಾಮಂಡಳಗಳು ತನ್ನ ಸದಸ್ಯ ಸಹಕಾರಗಳಿಗೆ, ಆಡಳಿತ ಮಂಡಳಿ ರಚನೆಯಲ್ಲಿ ಏನು ಸಂದೇಶ ನೀಡುತ್ತದೆ? .......... 23–24
ಅಂತರರಾಷ್ಟ್ರೀಯ ಯೋಗ ದಿನ– 'Yoga for One Earth, One Health .......... 31–32

# ಸಂಪಾದಕೀಯ

## ಸಹಕಾರಿಗಳಲ್ಲಿ ಆಂತರಿಕ ಶಿಸ್ತು ನಿರ್ವಹಣೆಗೆ ಆದ್ಯತೆ ಅಗತ್ಯ.

ದೇಶ, ರಾಜ್ಯ, ಕಂಪನಿಗಳ, ಎಲ್ಲ ರೀತಿಯ ಸಂಘ ಸಂಸ್ಥೆಗಳ ಯಶಸ್ವಿ ನಿರ್ವಹಣೆಯಲ್ಲಿ ಆಂತರಿಕ ಶಿಸ್ತು ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಸಹಕಾರ ಸಂಘಗಳ ಆಡಳಿತ ಮಂಡಳಿ, ಸದಸ್ಯರು, ವಿಶೇಷವಾಗಿ ಸಿಬ್ಬಂದಿಯವರು ಈ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸುವುದು ಅಗತ್ಯ.

ಮೇಲ್ನೋಟಕ್ಕೆ ಉತ್ತಮ ಕಟ್ಟಡ, ಉತ್ತಮ ಫರ್ನಿಚರ್‌ಗಳು, ವಾಹನ ಸೌಕರ್ಯಗಳು ಉತ್ತಮವಾಗಿರಬಹುದು. ಆದರೆ ಒಳನೋಟದಲ್ಲಿ ಆಂತರಿಕ ಶಿಸ್ತು ಪಾಲಿಸದಿದ್ದರೆ ಸಂಸ್ಥೆ ಹೆಚ್ಚು ದಿನ ಬಾಳುವುದಿಲ್ಲ ಮತ್ತು ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲ.

ಇದು ಪ್ರಚಾರ ಯುಗ ಮತ್ತು ಎಲ್.ಪಿ.ಜಿ ಅಂದರೆ ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣದಂತಹ ಪೈಪೋಟಿಯುಗದಲ್ಲಿ ಸಹಕಾರಿ ಸಂಸ್ಥೆಗಳು ಬಾಳಿ ಬದುಕುವುದು ಕಷ್ಟವಾಗಬಾರದು. ಕಷ್ಟ ಕಾಲದಲ್ಲೂ ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ ಎಂಬ ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯ ಹೇಳಿಕೆಗೆ ಪೂರಕವಾಗಿ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುವ ಕಾಲ ಇದಾಗಿದೆ. ಸಹಕಾರ ಕ್ಷೇತ್ರದ ವಿರಾಟ ಸ್ವರೂಪದಲ್ಲಿ ಈ ಆಂತರಿಕ ಶಿಸ್ತು ಹೆಚ್ಚಿನ ಮಹತ್ವವನ್ನು ಪಡೆದು ಉತ್ತಮವಾಗಿ ಕಾರ್ಯನಿರ್ವಹಿಸಿದಲ್ಲಿ ಸಹಕಾರ ಕ್ಷೇತ್ರ ಈಗಿನ ಸಾಧನೆಗಳನ್ನು ಮೀರಿ ಬೆಳೆಯಲು ಸಾಧ್ಯವಾಗುತ್ತದೆ. ಅದಕ್ಕಾಗಿ ಬಾಹ್ಯ ಶಿಸ್ತಿಗಿಂತ ಹೆಚ್ಚಿನ ಆದ್ಯತೆಗಿಂತ ಆಂತರಿಕ ಶಿಸ್ತು ನಿರ್ವಹಣೆ ಆದ್ಯತೆ ಅಗತ್ಯ.

ಆಂತರಿಕ ಶಿಸ್ತು ನಿರ್ವಹಣೆಯಲ್ಲಿ, ವಾರ್ಷಿಕ ಮಹಾಸಭೆ, ಆಡಳಿತ ಮಂಡಳಿ ಸಭೆ ಮತ್ತು ಉಪಸಮಿತಿ ಸಭೆಗಳನ್ನು ಕಾಲಕಾಲಕ್ಕೆ ವ್ಯವಸ್ಥಿತವಾಗಿ ನಿರ್ವಹಿಸುವುದು, ಅಧಿಕಾರಿಗಳ ಸಭೆ, ಸದಸ್ಯರ ಸಂಪರ್ಕ ಸಭೆಗಳು, ಕಛೇರಿ ಕಾರ್ಯನಿರ್ವಹಣೆ, ಕಡತಗಳ ನಿರ್ವಹಣೆ, ಕಡತಗಳ ಸಕಾಲಿಕ ವಿಲೇವಾರಿ, ಸಕಾಲಿಕ ಪತ್ರ ವ್ಯವಹಾರ ನಿರ್ವಹಣೆ, ವಿಭಾಗೀಯ ಕರ್ತವ್ಯಗಳ ಜವಾಬ್ದಾರಿಗಳ ನಿರ್ವಹಣೆ, ಸಾರ್ವಜನಿಕ ಸಂಪರ್ಕ, ಗ್ರಾಹಕರ ಸೇವೆಗಳ ನಿರ್ವಹಣೆ, ಹಣಕಾಸು ಶಿಸ್ತು ನಿರ್ವಹಣೆ, ಕಾನೂನು, ನಿಯಮಗಳ ಉಪನಿಯಮಗಳ ಹಾಗೂ ಒಳ ನಿಯಮಗಳ ಪಾಲನೆ, ಕಛೇರಿ ಶಿಷ್ಟಾಚಾರಗಳ ಪಾಲನೆ, ಕಛೇರಿ ವ್ಯವಸ್ಥೆಗಳ ಉತ್ತಮ ನಿರ್ವಹಣೆ, ಅಧ್ಯಕ್ಷರು, ಆಡಳಿತ ಮಂಡಳಿ, ವ್ಯವಸ್ಥಾಪಕ ನಿರ್ದೇಶಕರಾದಿಯಾಗಿ ಎಲ್ಲ ಹಿರಿಯ ಅಧಿಕಾರಿಗಳ ಜೊತೆಗೆ ಉತ್ತಮ ಸಂಬಂಧ, ಸಮಯ ಪಾಲನೆ, ಡ್ರೆಸ್ ಕೋಡ್, ಸ್ವಚ್ಛತೆಗೆ ಆದ್ಯತೆ, ವಿನಯದಿಂದ ವರ್ತಿಸುವುದು, ಸಹೋದ್ಯೋಗಿಗಳ ಜೊತೆಗೆ ಉತ್ತಮ ಸಂಬಂಧಗಳ ನಿರ್ವಹಣೆ, ಕಛೇರಿ ಸಮಯ ವ್ಯರ್ಥ ಮಾಡದಿರುವುದು, ಧೂಮಪಾನ ಸೇವನೆ ಇತ್ಯಾದಿ ದುಶ್ಚಟಗಳಿಂದ ದೂರವಿರುವುದು, ಕಛೇರಿ ವಸ್ತುಗಳ ಸದುಪಯೋಗ ಉತ್ತಮ ನಿರ್ವಹಣೆ, ಕಛೇರಿ ಸಮಯದಲ್ಲಿ ಸ್ವಂತ ಕೆಲಸಗಳಿಗೆ ಪ್ರಾಶಸ್ತ್ಯ ನೀಡದಿರುವುದು, ಎಲ್ಲವೂ ಆಂತರಿಕ ಶಿಸ್ತು ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ವ್ಯಾಮೋಹ"

ಮನಸ್ಸನ್ನು ನಿರ್ಮಲಗೊಳಿಸುವುದರ ಬಗ್ಗೆ ಚಿಂತನೆ ನಡೆದಿದೆ. ಒಂದು ಮನೆಯನ್ನು ಸ್ವಚ್ಛಗೊಳಿಸಿ, ದೀಪ ಹೆಚ್ಚಿದರೆ ಸಂತಸ ಉಂಟಾಗುತ್ತದೆ. ಅದೇ ರೀತಿ ನಮ್ಮ ಮನಸ್ಸು. ಮನಸ್ಸಿನಲ್ಲಿ ವ್ಯಾಮೋಹವೆಂಬ ಹೊಲಸು ಬೀಳುತ್ತದೆ. ಆಗ ಸತ್ಯ ನಮಗೆ ಗೊತ್ತಾಗುವುದಿಲ್ಲ. ಶಾಂತಿ ಸಮೀಪ ಸುಳಿಯುವುದಿಲ್ಲ.

ಒಂದು ಇಲಿ ಧಾನ್ಯಸಂಗ್ರಹಾಗಾರದಲ್ಲಿತ್ತು. ಎಲ್ಲ ತರಹದ ಧಾನ್ಯಗಳಿದ್ದವು. ಅದನ್ನೆಲ್ಲ ತಿಂದು ಆ ಇಲಿ ಆರಾಮ ಇತ್ತು. ಆದನ್ನು ಹಿಡಿಯಲು ಒಂದು ಬೋನನ್ನು ಇಟ್ಟು ಅದರಲ್ಲಿ ಬೇರೆ ರೀತಿಯ ತಿನ್ನುವುದನ್ನು ಇಟ್ಟರು ಇರುವುದೆಲ್ಲವನ್ನೂ ಬಿಟ್ಟು ಆ ಹೊಸತರ ವಾಸನೆ ಇಲಿಗೆ ಹಿಡಿಸಿತು. ಅದನ್ನು ತಿನ್ನಬೇಕೆಂಬ ಮೋಹ ಇಲಿಗೆ ಹಿಡಿಯಿತು. ಒಂದು 'ಬಜ್ಜಿ' ಇಲಿಗೆ ಹುಚ್ಚುಹಿಡಿಸಿತು. ಅದರ ವಾಸನೆ ಇಲಿಗೆ ಮೋಹ ಹಿಡಿಸಿತು. ಆ ದಿನ ಅದು ಆ ಬಜ್ಜಿಯನ್ನು ತಿನ್ನಲಿಲ್ಲ. ಹಾಗೆ ಮಲಗಿತು. ಕನಸಿನಲ್ಲಿ ಬಜ್ಜಿ ಬಂದಿತು. ಅಲ್ಲಿ ಬೋನು ಮಾಯವಾಗಿತ್ತು. ಅದೇ ವ್ಯಾಮೋಹ. ಮರುದಿನ ಇಲಿ ಎಚ್ಚರಗೊಂಡಾಗ ಅದು ಬೋನನ್ನು ಹೊಕ್ಕು ಬಜ್ಜಿಯನ್ನು ತಿಂದಿತು. ಆದರೆ ಹೊರಬರಲಾಗಲಿಲ್ಲ! ಅದೇ ರೀತಿ ಮನುಷ್ಯ ಕೂಡ. ಅವನೂ ಮೋಹದಿಂದಾಗಿ ಅನೇಕ ಬೋನುಗಳಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ. ಎಲ್ಲಿಯವರೆಗೆ ಆ ಮೋಹದಿಂದ ಹೊರಬರುವುದಿಲ್ಲವೋ ಅಲ್ಲಿಯವರೆಗೆ ಮುಕ್ತನಾಗುವುದಿಲ್ಲ. ಮೋಹ ಎಂದರೆ ಅಂಟಿಕೊಳ್ಳುವುದು. ಕೆಲವು ಸಲ ಸಣ್ಣ ಸಣ್ಣ ವಿಷಯಗಳಲ್ಲೂ ಸಹ ಮೋಹವುಂಟಾಗುತ್ತದೆ.

ಯಾವ ಭಾವನೆಗಳಿದ್ದರೆ ಈ ಮನುಷ್ಯ ಒಳ್ಳೆಯವನಲ್ಲ ಅನ್ನಿಸುತ್ತದೆಯೋ ಅಂತಹ ಭಾವನೆಗಳು ಮನಸ್ಸಿನ ವ್ಯಾಮೋಹಗಳು. ಇದಕ್ಕೆ ಕೆಲವು ಗುಣಗಳಿವೆ. ಉದಾಹರಣೆಗೆ, ಒಂದು ಕುಟುಂಬ. ಅಣ್ಣ ತಮ್ಮಂದಿರಿದ್ದರು. ಅವರಿಬ್ಬರಿಗೂ ವಿವಾಹವಾಗಿತ್ತು. ತಂದೆ ತೀರಿದ್ದ. 100 ಕ್ಕಿಂತ ಹೆಚ್ಚು ಎಕರೆ ಭೂಮಿ ಇತ್ತು. ಎರಡು ಪ್ರತ್ಯೇಕ ಮನೆಗಳಿದ್ದವು. ಆ ಮನೆಗಳ ಮಧ್ಯ ಒಂದು ರಸ್ತೆ ಇತ್ತು. ಅಣ್ಣನಿಗೆ ಮಕ್ಕಳಿರಲಿಲ್ಲ. ತಮ್ಮನಿಗೆ ನಾಲ್ಕೈದು ವರ್ಷದ ಮಗುವಿತ್ತು. ಆ ಮಗು ಅಣ್ಣನ ಮನೆ ಬಂದಾಗಲೆಲ್ಲಾ ಅವರಿಗೆ ನೋವಾಗುತ್ತಿತ್ತು. ತಮಗೆ ಮಕ್ಕಳಿಲ್ಲದ ಕೊರತೆ ಕಾಡುತಿತ್ತು. ಒಬ್ಬ ಮಿಠಾಯಿ ಮಾರುವವ ದಿನವೂ ಅಲ್ಲಿ ಬರುತ್ತಿದ್ದ. ಆ ತಮ್ಮನ ಮಗ ಬಹಳ ತುಂಟನಾಗಿದ್ದ ಎಲ್ಲರೊಡನೆ ಮಾತನಾಡುತ್ತಿದ್ದ. ಮಿಠಾಯಿ ಮಾರುವವ ಹಾಗೂ ಬಾಲಕನ ಮಧ್ಯ ಬೇಗನೇ ಸ್ನೇಹವಾಗಿತು. ಆ ಊರಿನ ಎಲ್ಲ ಬಾಲಕರು ಮಿಠಾಯಿ ಮಾರುವವನ ದಾರಿ ಕಾಯುತ್ತಿದ್ದರು. ಅವನಿಗೆ ಹೆಂಡತಿ, ಮಕ್ಕಳಿರಲಿಲ್ಲ. ಆದರೆ ಊರಿನ ಎಲ್ಲ ಮಕ್ಕಳೂ ಅವನನ್ನು ಬಹಳ ಹಚ್ಚಿಕೊಂಡಿದ್ದರು. ಅವರಿಬ್ಬರ ಸ್ನೇಹ ಅಣ್ಣನಿಗೆ ಗೊತ್ತಿತ್ತು. ತಮ್ಮನ ಮಗವನ್ನು ಮುಗಿಸಲು ಅಣ್ಣ ಬಯಸಿದ. ಗಂಡ ಹೆಂಡತಿ ತಮಗಿಲ್ಲದ್ದು ಅವರಿಗ್ಯಾಕೆ ಎಂದು ಯೋಜನೆ ಹಾಕಿದರು. ಹೆಂಡತಿ ಹೇಳಿದಳು. ಆ ಮಿಠಾಯಿಗಾರ ಕೊಡುವುದನ್ನು ಎಲ್ಲರೂ ತಿನ್ನುತ್ತಾರೆ. ಆದ್ದರಿಂದ ಅವನ್ನು ಹಿಡಿದರೆ ಕೆಲಸವಾಗುತ್ತದೆ. ಅವರು ಒಂದು ದಿನ ವಿಷ ತೆಗೆದುಕೊಂಡು ಮಿಠಾಯಿಗಾರನ ಗುಡಿಸಲಿಗೆ ಹೋದಾಗ ಮಿಠಾಯಿಗಾರ ನನಗೆ ಸಿಹಿ ಕೊಟ್ಟು ಗೊತ್ತು ಹೊರತು ವಿಷ ಹಾಕಿ ಗೊತ್ತಿಲ್ಲ, ನಾನು ಈ ಉದ್ಯೋಗ ಮಾಡುತ್ತಿರುವುದು ಹಣ ಗಳಿಸುವುದಕ್ಕಾಗಿ ಅಲ್ಲ. ಎಲ್ಲರಿಗೂ ಸಿಹಿ ತಿನ್ನಿಸುವುದಕ್ಕಾಗಿ ಎಂದು ಹೇಳಿದ. ಆಗ ಅಣ್ಣ ಮಿಠಾಯಿಗಾರನನ್ನು ಬೆದರಿಸಿದ ಊರನ್ನು ಬಿಡಬೇಕಾದೀತು ಎಂದ. ಆಗ ಮಿಠಾಯಿಗಾರ, "ಈ ಊರು ನನ್ನದೂ ಅಲ್ಲ, ನಿಮ್ಮದೂ ಅಲ್ಲ. ನಾನೇನೂ ಈ ಊರನ್ನು ಸುಲಭವಾಗಿ ಬಿಟ್ಟು ಹೋಗುತ್ತೇನೆ. ಆದರೆ ನಿಮ್ಮದನ್ನು ವಿಚಾರಿಸಿ. ನೀವು ಎಲ್ಲವನ್ನೂ ಕಳೆದುಕೊಳ್ಳುತ್ತೀರಿ ಎಂದು ಹೇಳಿದ. ಇದು ಮನಸ್ಸಿನ ವ್ಯಾಮೋಹ.

ಒಬ್ಬ ಮುದುಕ ಹೊಸ ಚಪ್ಪಲಿ ತಂದಿದ್ದ. ಅವನ ಮರಣ ಸಮೀಪಿಸಿತು. ಆಗ ಆ ಮುದುಕ ಹೇಳಿದ, "ಕನಿಷ್ಟ ಐದಾರೂ ತಿಂಗಳಾದರು ಈ ಚಪ್ಪಲಿಗಳನ್ನು ಅನುಭವಿಸಬೇಕು!".

ಇದರರ್ಥ ವಸ್ತುಗಳು ಇರಬಾರದೆಂದೇನಿಲ್ಲ, ಆದರೆ ಅದರ ಜೊತೆ ನಿರ್ಮೋಹ ಇರಬೇಕು. ಎಲ್ಲವನ್ನೂ ಹೊರಗಿಟ್ಟು, ಆರಾಮ ಇರಬೇಕು. ಒಳಗೆ ಹೋಗಬಾರದು. ಮನಸ್ಸನ್ನು ನಿರ್ಲಿಪ್ತಗೊಳಿಸಬೇಕು. ಪರಮಗತಿಯನ್ನು ಮನುಷ್ಯ ಹೊಂದಬೇಕು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಮೇ–25ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 1378 | 432 | 538 | 300 | 2648 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 72 | 127 | 59 | 33 | 291 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 277 | 123 | 135 | 56 | 591 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 1173 | 436 | 462 | 277 | 2348 |
| ಮೇ 2025ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 291 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 591 | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 6996 | 1231 | 2097 | 742 | 11066 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1031 | 220 | 489 | 152 | 1892 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 5965 | 1011 | 1608 | 590 | 9174 |
| ಮೇ 2025ರ ತಿಂಗಳಿನಲ್ಲಿ ಒಟ್ಟು 54 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ. | | | | | | |

# ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯಕ್ಕೆ ಆಡಳಿತ ಮಂಡಳಿ

# Tribhuvan Sahakari University Board formed : Top Co-operators included

In a landmark development for India's cooperative movement, the Ministry of Cooperation has constituted the first Governing Board of the newly established "Tribhuvan" Sahkari University in Anand, Gujarat. The Governing Board comprises a balanced mix of ex-officio members and nominated representatives drawn from central ministries, cooperative institutions, and state governments.

This initiative marks a significant step toward institutionalizing cooperative education and fostering leadership rooted in cooperative values and economic inclusivity. The Board, constituted under sub-section (2) of Section 21 of the "Tribhuvan" Sahkari University Act, 2025, will be effective from May 27, 2025.

Among the ex-officio members are key figures such as the Vice-Chancellor of the University, Secretaries from the Ministries of Cooperation, Agriculture & Farmers Welfare, Animal Husbandry and Dairying, Food Processing Industries, and Fisheries.

Also included are the Managing Director of the National Cooperative Development Corporation (NCDC), Chairpersons of the National Dairy Development Board (NDDB) and National Bank for Agriculture and Rural Development (NABARD), along with senior officials from the Reserve Bank of India and other allied bodies. The Finance Officer and Registrar of the University are also members, with the Registrar designated as the Member-Secretary.

In addition to the ex-officio members, several nominated members will serve on a rotation basis, bringing in regional and sector-specific expertise. These include Principal Secretaries or Secretaries from the Cooperation Departments of Madhya Pradesh, Assam, Kerala, and Gujarat.

Among the most noteworthy appointments from grassroots cooperative leadership are National Cooperative Union of India President Dileep Sanghani and RBI Central Board Director and Sahakar Bharati founding member Satish Marathe, two eminent figures whose contributions have been pivotal in shaping cooperative policies at the national level.

Sanghani's longstanding advocacy for cooperative empowerment and Marathe's financial governance experience at the RBI are expected to add both grassroots depth and regulatory insight to the Board's operations.

Chairpersons of major cooperatives like IFFCO, KRIBHCO, NAFED, and NCCF, will serve as rotational members. This rotating model is intended to provide a dynamic policy framework enriched by diverse expertise.

Also drawing considerable attention is the inclusion of Ms. Arti Patil, Managing Director and CEO of Saraswat Cooperative Bank, India's largest urban cooperative bank. Her presence on the Board not only highlights the growing role of women in cooperative leadership but also reflects her banking acumen and digital transformation initiatives of Saraswat Bank.


Joining this esteemed panel is Ms. Jeena Potsangbam, Vice-President of the Manipur State Cooperative Union. Her appointment underscores the Centre's commitment to ensuring geographical and cultural representation in shaping India's cooperative education strategy.

Experts say the composition represents a strategic leap in blending academic rigor with cooperative principles, ushering in a new era for rural development, financial literacy, and decentralized economic empowerment across India.

# ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ನಡೆದ ಕೌಶಲ್ಯ ಅಭಿವೃದ್ಧಿ ತರಬೇತಿ ಹಾಗೂ ವೃತ್ತಿಪರತೆ ತರಬೇತಿಗಳು ಅರ್ಥಪೂರ್ಣ



**ಮೈಸೂರು** : ಸಂಯುಕ್ತ ಸಹಕಾರಿಯ ವಾರ್ಷಿಕ ಕಾರ್ಯಕ್ರಮದಂತೆ ಸಂಯುಕ್ತ ಸಹಕಾರಿಯ ಎಲ್ಲ ಸಿಬ್ಬಂದಿಯವರಿಗಾಗಿ ಮೈಸೂರಿನ ರಾಮಕೃಷ್ಣ ನೈತಿಕ ಹಾಗೂ ಅಧ್ಯಾತ್ಮಿಕ ತರಬೇತಿ ಸಂಸ್ಥೆಯಲ್ಲಿ ದಿನಾಂಕ 09.05.2025 ರಿಂದ 11.05.2025 ರವರೆಗೆ ಅಧಿಕಾರಿ ವರ್ಗ ಹುದ್ದೆಯಿಂದ ಮೇಲ್ಪಟ್ಟ ಅಧಿಕಾರಿ ವರ್ಗದವರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಹಾಗೂ ಕಿರಿಯ ಸಹಾಯಕರಿಂದ ಕಿರಿಯ ಅಧಿಕಾರಿ ವರ್ಗದವರಿಗೆ ವೃತ್ತಿಪರತೆ ತರಬೇತಿ ಕಾರ್ಯಕ್ರಮವನ್ನು ಮತ್ತು ಉಪಸಿಬ್ಬಂದಿ ಹಾಗೂ ವಾಹನ ಚಾಲಕರಿಗಾಗಿಯೂ ವೃತ್ತಿಪರತೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.




## ಸಹಕಾರ ಕ್ಷೇತ್ರ ಅತ್ಯಂತ ಪವಿತ್ರವಾದ ಕ್ಷೇತ್ರ. ಸೇವಾ ಭಾವನೆಯಿಂದ ಕಾರ್ಯನಿರ್ವಹಿಸಿ.

### : ಶ್ರೀ ಮುಕ್ತಿದಾನಂದಜಿ, ಮಾನ್ಯ ಅಧ್ಯಕ್ಷರು, ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು

ಸಂಯುಕ್ತ ಸಹಕಾರಿಯ ಎಲ್ಲ ಸಿಬ್ಬಂದಿಯವರಿಗಾಗಿ ಏರ್ಪಡಿಸಿರುವ ಈ ತರಬೇತಿ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ ಮೈಸೂರು ರಾಮಾಕೃಷ್ಣಾಶ್ರಮದ ಅಧ್ಯಕ್ಷರಾದ ಶ್ರೀ ಮುಕ್ತಿದಾನಂದ ಸ್ವಾಮಿಜೀಯವರು ಮಾತನಾಡಿ ಸಹಕಾರ ಕ್ಷೇತ್ರ ಅತ್ಯಂತ ಪವಿತ್ರವಾದ ಕ್ಷೇತ್ರ. ಶ್ರೀ ಸಾಮಾನ್ಯ ಬೇಕು ಬೇಡಿಕೆಗಳಿಗೆ ಸ್ಪಂದಿಸುವ ಕ್ಷೇತ್ರ ಈ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುವ ಎಲ್ಲರೂ ಪರಸ್ಪರ ಸಹಕಾರದಿಂದ ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸುವುದು ಅಗತ್ಯ. ಕಾರ್ಯಕ್ರಮ ಅತ್ಯಂತ ಉಪಯುಕ್ತವಾಗಿದೆ. ಸಮಾಜದ ಅಭಿವೃದ್ಧಿಗೆ ಪರಸ್ಪರ ಸಹಕಾರ ಮನೋಭಾವ ಬೆಳೆಯಲು ಈ ತರಬೇತಿ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಎಂದು ತಿಳಿಸಿ ಶುಭ ಹಾರೈಸಿದರು.

## ನೈತಿಕತೆ ಹಾಗೂ ಮಾನವೀಯ ಮೌಲ್ಯಗಳ ಬಲವರ್ಧನೆಗೆ ಒತ್ತು ನೀಡುವ ತರಬೇತಿ

### : ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರರು ಸಂಯುಕ್ತ ಸಹಕಾರಿಯ ವತಿಯಿಂದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಎಲ್ಲ ವರ್ಗವರಿಗೂ ಶಿಕ್ಷಣ ಹಾಗೂ ತರಬೇತಿಯನ್ನು ನೀಡುವ ಹಾಗೆ ಸಂಯುಕ್ತ ಸಹಕಾರಿಯ ವತಿಯಿಂದ ಸಂಯುಕ್ತ ಸಹಕಾರಿಯ ಎಲ್ಲ ಸಿಬ್ಬಂದಿವರ್ಗದ–ರಿಗೂ ಪ್ರತಿವರ್ಷ ತರಬೇತಿ ನೀಡಿ ಅವರಲ್ಲಿ ಹೆಚ್ಚಿನ ಕೌಶಲ್ಯವನ್ನು ಹೆಚ್ಚಿಸುವ ಅವರಲ್ಲಿ ವೃತ್ತಿಪರತೆಯನ್ನು ಹೆಚ್ಚಿಸುವ ಕೆಲಸವನ್ನು ಮಾಡಲಾಗುತ್ತಿದೆ. ಉಪಸಿಬ್ಬಂದಿ ಹಾಗೂ ಚಾಲಕರಿಗೂ ಸಹ ತರಬೇತಿ ನೀಡಿ ಅವರಲ್ಲಿ ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಯತ್ನ ಇದಾಗಿದೆ. ಅದರ ಜೊತೆಗೆ ಮಾನವೀಯ ಮೌಲ್ಯಗಳ ನೈತಿಕತೆಯ ಬಲವರ್ಧನೆಯ ಪ್ರಯತ್ನ ಇದಾಗಿದೆ ಎಂದು ತಿಳಿಸಿದರು. ಸಿಬ್ಬಂದಿಯವರು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಠೇವಣಿದಾರರ ಹಿತರಕ್ಷಣೆಗೆ ಮೊದಲ ಆದ್ಯತೆ ನೀಡಬೇಕು. ಸಾರ್ವಜನಿಕರ ವಿಶ್ವಾಸಾರ್ಹತೆಯನ್ನು ಗಳಿಸಬೇಕು. ವಿಶೇಷವಾಗಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳು ಹೆಚ್ಚಿನ ಜವಾಬ್ದಾರಿಯಿದೆ ಎಂದು ತಿಳಿಸಿದರು.



## ನನ್ನ ಕೆಲಸಕ್ಕೆ ನಾನು ನ್ಯಾಯ ಕೊಡುತ್ತೇನೆ ಎಂಬ ಸಂಕಲ್ಪ ಸಿಬ್ಬಂದಿಗಳಲ್ಲಿ ಅಗತ್ಯ.

### : ಶ್ರೀ ಹೆಚ್.ವಿ. ರಾಜೀವ್, ಮಾನ್ಯ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರೂ ಹಾಗೂ ಮಾಜಿ ಉಪಾಧ್ಯಕ್ಷರೂ ಆಗಿರುವ ಶ್ರೀ ಹೆಚ್.ವಿ.ರಾಜೀವ ರವರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ ಅರಮನೆಗಳ ನಗರ ಮೈಸೂರು ಮಹಾರಾಜರ ನೇತೃತ್ವದಲ್ಲಿ ಐತಿಹಾಸಿಕ ಹಾಗೂ ಪೌರಾಣಿಕ ಸ್ಥಾನವನ್ನು ಪಡೆದ ಈ ಸುಂದರ ನಗರಕ್ಕೆ

ಎಲ್ಲರಿಗೂ ಆತ್ಮೀಯವಾಗಿ ಸ್ವಾಗತಿಸಿ ಈ ಸುಂದರ ನಗರವೇ ನಮಗೆ ಅನೇಕ ಪಾಠಗಳನ್ನು ಕಲಿಸುತ್ತದೆ ಎಂದು ಹೇಳುತ್ತ ಈ ಉತ್ತಮ ಪರಿಸರದ ತರಬೇತಿ ನಿಮಗೇ ಉತ್ತಮತೆಯತ್ತ ಸಾಗಲು ಪೂರಕವಾಗಿದೆ ಸಂಯುಕ್ತ ಸಹಕಾರಿಯ ಪ್ರತಿಯೊಬ್ಬ ಸಿಬ್ಬಂದಿಯವರು ತಾನು ಮಾಡುವ ಕೆಲಸಕ್ಕೆ ನ್ಯಾಯವನ್ನು ನೀಡುವುದಾಗಿ ಸಂಕಲ್ಪ ಮಾಡಿ ಕಾರ್ಯನಿರ್ವಹಿಸಬೇಕು. ಹಾಗಾದಾಗ ಮಾತ್ರ ನಮ್ಮ ಸಂಸ್ಥೆಯನ್ನು ಇನ್ನೂ ಎತ್ತರಕ್ಕೆ ಬೆಳೆಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.



### ನಮಗೆ ವಹಿಸಿದ ಜವಾಬ್ದಾರಿಯನ್ನು ಬೇರೆಯವರು ಪ್ರಶ್ನಿಸದಂತೆ ಕಾರ್ಯನಿರ್ವಹಿಸುವುದು ಅಗತ್ಯ

**: ಶ್ರೀ ಸಿ.ಎನ್.ಪರಶಿವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರು (ನಿ.) ಮೈಸೂರು.**

ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು, ಸಂಯುಕ್ತ ಸಹಕಾರಿಯ ಹಿತೈಸಿಗಳಾದ ಶ್ರೀ ಸಿ.ಎನ್.ಪರಶಿವಮೂರ್ತಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ ಈ ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಬೆಳವಣಿಗೆಯ ವೇಗ ಉತ್ತಮವಾಗಿದೆ. ಸಂಯುಕ್ತ ಸಹಕಾರಿ ಅಧಿಕಾರಿಗಳು ನಿಷ್ಠೆ ಹಾಗೂ ದಕ್ಷತೆಯಿಂದ ಕಾರ್ಯನಿರ್ವಹಿಸುವ ಜೊತೆಗೆ ನಮಗೆ ವಹಿಸಿದ ಜವಾಬ್ದಾರಿಯನ್ನು ಬೇರೆಯವರು ಪ್ರಶ್ನಿಸದಂತೆ ಕಾರ್ಯನಿರ್ವಹಿಸುವುದು ಅಗತ್ಯ ಎಂದು ತಿಳಿಸಿದರು.




### ಶಿಸ್ತಿನ ಜೀವನ ರೂಢಿಸಿಕೊಳ್ಳಿ ನಿಮ್ಮ ಬೆಳವಣಿಗೆಗೆ ಅದು ಪೂರಕ.

**: ಶ್ರೀಮತಿ ಗಗನ ಕೆ. ಮಾನ್ಯ ಪೀಠಾಧಿಕಾರಿಗಳು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು**

ಸಂಯುಕ್ತ ಸಹಕಾರಿಯ ದಾವಾಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿ ಶ್ರೀಮತಿ ಗಗನ ಕೆ. ರವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಇದು ಒಂದು ಒಳ್ಳೆಯ ಕಾರ್ಯಕ್ರಮ. ಉತ್ತಮ ವಿಷಯಗಳನ್ನು ಅಳವಡಿಸಿದ್ದಾರೆ. ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಬರಮಾಡಿಕೊಂಡಿದ್ದಾರೆ. ಇವೆಲ್ಲವುಗಳನ್ನು ತಿಳಿದು ನೀವು ಕೂಡ ಒಬ್ಬ ಒಳ್ಳೆಯ ಸಂಪನ್ಮೂಲ ವ್ಯಕ್ತಿಯಾಗಿ ಬೆಳೆಯಬೇಕು ಎಂದು ತಿಳಿಸಿದರು. ಇವೆಲ್ಲ ಸಾಧನೆಗಳಿಗೆ ಶ್ರಮ ಬೇಕಾಗುತ್ತದೆ. ಅದಕ್ಕಾಗಿ ಉತ್ತಮ ಆರೋಗ್ಯ ನಿರ್ವಹಣೆ ಮಾಡಿ. ಶಿಸ್ತು ಅಳವಡಿಸಿಕೊಳ್ಳಿ. ನಿರಂತರ ಅಧ್ಯಯನ ಮಾಡಿ. ನಿಮ್ಮ ಸೇವೆಗಳನ್ನು ಏನನ್ನೂ ಅಪೇಕ್ಷಿಸದೆ ನಿಸ್ವಾರ್ಥತೆಯಿಂದ ಮಾಡಿ ನಿಮಗೆ ಜೀವನದಲ್ಲಿ ನೆಮ್ಮದಿ ಸಿಗುತ್ತದೆ. ಉತ್ತರೋತ್ತರ ಅಭಿವೃದ್ಧಿಯನ್ನು ಸಾಧಿಸುತ್ತೀರಿ ಎಂದು ತಿಳಿಸಿದರು. ಪ್ರಾರಂಭದಲ್ಲಿ ಶ್ರೀಮತಿ ದಿವ್ಯಾರವರಿಂದ ಪ್ರಾರ್ಥನೆಯಾದ ಬಳಿಕ ಮೈಸೂರು ಪ್ರಾಂತೀಯ ಅಧಿಕಾರಿ ಶ್ರೀ ಗುರುಪ್ರಸಾದರವರು ಅತಿಥಿ ಗಣ್ಯರನ್ನು ಹಾಗೂ ಎಲ್ಲ ಪ್ರತಿನಿಧಿಗಳನ್ನು ಸ್ವಾಗತಿಸಿದರು.




### ಪರಿಣಾಮಕಾರಿ ತರಬೇತಿ ಹಾಗೂ ಶಿಕ್ಷಣ ವ್ಯವಸ್ಥೆಗಳಿಂದ ಸಂಯುಕ್ತ ಸಹಕಾರಿಗೆ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಾತ್ಮಕ ಬೆಳವಣಿಗೆ ಸಾಧ್ಯ.


**: ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಪ್ರಾಸ್ತಾವಿಕವಾಗಿ ಮಾತನಾಡುತ್ತ ಸಂಯುಕ್ತ ಸಹಕಾರಿ ಈ ದೇಶದಲ್ಲಿಯೇ ಒಂದು ವಿಭಿನ್ನವಾದ ಸಂಸ್ಥೆ. ಸ್ವಾಯತ್ತತೆ, ಸ್ವಯಂ ನಿಯಂತ್ರಣ ಹಾಗೂ ಸ್ವಯಂ ಆಡಳಿತದ ತಳಹದಿಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಈ ಸಂಸ್ಥೆ ರಾಜ್ಯದಲ್ಲಿ ಶಾಸನಾತ್ಮಕ ಕಾರ್ಯಗಳ ಜೊತೆಗೆ ಶಿಕ್ಷಣ, ತರಬೇತಿ ಹಾಗೂ ಪ್ರಚಾರಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತ ಬಂದಿದೆ. ಸಹಕಾರ ಕ್ಷೇತ್ರದ ಎಲ್ಲ ವರ್ಗದ ಸಹಕಾರಿಗೂ ವಿಭಿನ್ನ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ತರಬೇತಿ ಕ್ಷೇತ್ರದಲ್ಲಿ ಉತ್ತಮ ಗುಣಮಟ್ಟ ಕಾಯ್ದುಕೊಂಡಿದೆ. ಪ್ರಸಕ್ತ ಸಾಲಿನಲ್ಲಿ ಸಂಯುಕ್ತ ಸಹಕಾರಿಯ ಎಲ್ಲ ಸಿಬ್ಬಂದಿಯವರಿಗೆ ಅವರ ಕಾರ್ಯಕೌಶಲ್ಯ ಹಾಗೂ ಅವರಲ್ಲಿ ವೃತ್ತಿಪರತೆ ಬೆಳೆಯುವುದಕ್ಕೆ ಅವಶ್ಯಕವಾಗುವ ವಿಷಯಗಳನ್ನು ಆಯ್ಕೆ ಮಾಡಿ ಉತ್ತಮ ಪರಿಸರವನ್ನು ಆಯ್ಕೆ ಮಾಡಿ ಈ ತರಬೇತಿಯನ್ನು ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ತರಬೇತಿ ಕಾರ್ಯಕ್ರಮಗಳಲ್ಲಿ ಸಂಯುಕ್ತ ಸಹಕಾರಿಯ 131 ಸಿಬ್ಬಂದಿಯವರು ಭಾಗವಹಿಸಿದ್ದರು. 12 ಜನ ನುರಿತ ಸಂಪನ್ಮೂಲ ವ್ಯಕ್ತಿಗಳು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

## ವಿವಿಧ ಸಹಕಾರ ಸಂಘಗಳಿಗೆ ಭೇಟಿ ಹಾಗೂ ಅಧ್ಯಯನ

ಕಾರ್ಯಕ್ರಮದ ಅಂಗವಾಗಿ ಕೃಷಿ ಪತ್ತಿನ ಸಹಕಾರ ಸಂಘ ಯಾಚನಹಳ್ಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಖ್ಯಾತೆಗೌಡರವರು ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ವಿವರ ನೀಡಿದರು. ಸಪ್ತಶ್ರೀ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರರವರು ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ವಿವರ ನೀಡಿದರು. ನಂತರ ಶ್ರೀ ಜ್ಞಾನಗಂಗಾ ಗೃಹನಿರ್ಮಾಣ ಸಹಕಾರಿ ಸಂಘಕ್ಕೆ ಭೇಟಿ ನೀಡಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವರವರು ಸಂಘದ ಕಾರ್ಯಚಟುವಟಿಕೆಗಳ ಸಂಪೂರ್ಣ ವಿವರ ನೀಡಿದರು. ಮತ್ತು ಸಾಧನೆಗಳನ್ನು ತಿಳಿಸಿದರು.



## ಶ್ರೀ ಹೆಚ್.ವಿ. ರಾಜೀವ ರವರಿಗೆ ಅಭಿನಂದನೆ

ಶ್ರೀಯುತ ಹೆಚ್.ವಿ ರಾಜೀವರವರು ಇತ್ತೀಚೆಗೆ ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಳದ ನಿರ್ದೇಶಕರಾಗಿ ಆಯ್ಕೆಗೊಂಡ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಇವರು ಎಲ್ಲಾ ಸಿಬ್ಬಂದಿಯವರ ಪರವಾಗಿ ಶ್ರೀಯುತರನ್ನು ಅಭಿನಂದಿಸಲಾಯಿತು.

## ಸಮಾರೋಪ ಸಮಾರಂಭ




ದಿನಾಂಕ 11.05.2025 ರಂದು ಮಧ್ಯಾಹ್ನ 12–30 ಕ್ಕೆ ಈ ತರಬೇತಿ ಕಾರ್ಯಕ್ರಮದ ಸಮಾರೋಪ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಶರಣಗೌಡ ಜಿ. ಪಾಟೀಲ್‌ರವರು ವಹಿಸಿದ್ದರು. ಸಭೆಯಲ್ಲಿ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆಯವರು, ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಧರರವರು, ಶ್ರೀ ರಾಜಶೇಖರ ಹೂಗಾರರವರು ಪ್ರಾಂತೀಯ ಅಧಿಕಾ–ರಿಗಳಾದ ಶ್ರೀ ಬಸವರಾಜ ಹೊಂಗಲ, ಶ್ರೀ ಗುರುಪ್ರಸಾದ ಬಂಗೇರಾ ತರಬೇತಿ ಸಲಹೆಗಾರ ಶ್ರೀ ವಿ.ಜೆ.ಕಾರಕೂನರವರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ನೂತನ ಸಿಬ್ಬಂದಿಗಳನ್ನು ಪರಿಚಯಿಸಲಾಯಿತು. ನಂತರದಲ್ಲಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಿಬ್ಬಂದಿಯವರು ಈ ಕಾರ್ಯಕ್ರಮ ಅತ್ಯಂತ ಉತ್ತಮವಾದ ಸ್ಥಳದಲ್ಲಿ ಉತ್ತಮ ಪರಿಸರದಲ್ಲಿ ಉತ್ತಮ ವಿಷಯಗಳ ಹಾಗೂ ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಅಳವಡಿಸಿ ವ್ಯವಸ್ಥಿತವಾಗಿ ಏರ್ಪಡಿಸಲಾಗಿತ್ತು ಎಂದು ಅಭಿಪ್ರಾಯ ತಿಳಿಸಿದರು.

### ಸಿಬ್ಬಂದಿಯವರು ಜವಾಬ್ದಾರಿ ಹಾಗೂ ಉತ್ತರದಾಯಿತ್ವತೆಯನ್ನು ರೂಢಿಸಿಕೊಳ್ಳಿ : ಶರಣಗೌಡ ಜಿ. ಪಾಟೀಲ

ನಂತರ ಸಮಾರೋಪ ಭಾಷಣ ಮಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಮಾತನಾಡಿ ಈ ತರಬೇತಿಯನ್ನು ಹಮ್ಮಿಕೊಳ್ಳಲು ಸಮ್ಮತಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಆಡಳಿತ ಮಂಡಳಿಯವರಿಗೆ ಧನ್ಯವಾದಗಳನ್ನು ತಿಳಿಸುತ್ತ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ಆಡಳಿತ ಮಂಡಳಿಯ ಆಶಯದಂತೆ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ನಿಷ್ಠೆಯಿಂದ ಕಾರ್ಯನಿರ್ವಹಿಸುವ ಅಗತ್ಯತೆ ಇದೆ. ಸಿಬ್ಬಂದಿಯವರು ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಉತ್ತರ ದಾಯಿತ್ವತೆಯನ್ನು ಬೆಳೆಸಿಕೊಳ್ಳಬೇಕು. ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ರಜತ ಮಹೋತ್ಸವದ ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಉತ್ತಮ ಸಂದೇಶವನ್ನು ನೀಡಬೇಕು. ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಂದ ಸಹಕಾರಿ ಇಲಾಖೆ, ಸಹಕಾರಿಗಳು, ಸೌಹಾರ್ದ ಸಹಕಾರಿಗಳು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳು ಕೆಲವು ನೀರೀಕ್ಷೆಗಳನ್ನು ಹೊಂದಿರುತ್ತಾರೆ. ಎಲ್ಲರ ನಿರೀಕ್ಷೇಗಳಿಗೆ ಸ್ಫಂದಿಸುವಂತೆ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕ ಮಂಡಳಿಯವರ ವಿದೇಶ ಪ್ರವಾಸ ವಿದೇಶಗಳಲ್ಲಿ ನಾಗರಿಕ ಪ್ರಜ್ಞೆ, ಶಿಸ್ತು, ಸಮಯ ಪಾಲನೆ ಹಾಗೂ ಕಾನೂನಿನ ಪ್ರಜ್ಞೆಗಳ ಮೆಚ್ಚುಗೆ - ಅನುಕರಣೀಯ ವ್ಯವಸ್ಥೆಗಳು






ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳು 14 ಏಪ್ರಿಲ್ 2025 ರಿಂದ 29 ಏಪ್ರಿಲ್ 2025 ರವರೆಗೆ ಯುರೋಪ್ ಹಾಗೂ ಯುನೈಟೆಡ್ ಕಿಂಗ್ಡಮ್ 7 ದೇಶಗಳಿಗೆ ದೇಶಗಳಿಗೆ ಅಧ್ಯಯನ ಪ್ರವಾಸ ಕೈಗೊಂಡು ಯಶಸ್ವಿಯಾಗಿ ಎಲ್ಲರೂ ಉತ್ತಮ ಆರೋಗ್ಯ ಹಾಗೂ ಹೆಚ್ಚಿನ ಉತ್ಸಾಹದಿಂದ ಮರಳಿ ಬಂದಿರುವುದು ಅತ್ಯಂತ ಸಂತೋಷದ ವಿಷಯ.

ಅಧ್ಯಯನ ಪ್ರವಾಸದ ಅನುಭವಗಳ ಬಗ್ಗೆ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು, ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರಾದ ಶ್ರೀ ಹೆಚ್.ವಿ ರಾಜೀವರವರನ್ನು, ಶ್ರೀ ಮಂಜುನಾಥ ಎಸ್.ಕೆ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಅವರುಗಳು ನೀಡಿದ ಮಾಹಿತಿಗಳ ಕ್ರೋಢೀಕ್ರತ ಅಭಿಪ್ರಾಯ ಹೀಗಿದೆ.

**ವಿಶೇಷತೆಗಳು :**

ಬಹಳ ವರ್ಷಗಳ ಹಿಂದೆಯೇ ಈ ದೇಶಗಳು ತಂತ್ರಜ್ಞಾನವನ್ನು ಅಳವಡಿಸಿ ಕೊಂಡಿವೆ. ಎಲ್ಲ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ಸಮಯಕ್ಕೆ ಸರಿಯಾಗಿ ನಿರ್ವಹಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲಾಗಿದೆ. ಸಮಯ ಪಾಲನೆಗೆ ಮೊದಲ ಆದ್ಯತೆಯಾದರೆ ಪ್ರಾಮಾಣಿಕತೆ ನಿಷ್ಠೆ ಅವರ ಕೆಲಸದ ಅಡಿಪಾಯವಾಗಿದೆ.

ನಾಗರಿಕ ಪ್ರಜ್ಞೆ ಅವರ ಕರ್ತವ್ಯ ಹಾಗೂ ಜವಾಬ್ದಾರಿಗಳ ನಿರ್ವಹಣೆ ಶ್ಲಾಘನೀಯ. ದೇಶ ಮೊದಲು ನಂತರ ನಾವು ಎನ್ನುವ ಮನೋಭಾವದವರು. ಯಾವುದೇ ಕೆಲಸವಿರಲಿ ಶ್ರದ್ಧೆಯಿಂದ ನಿರ್ವಹಿಸುವುದು ಅಧಿಕಾರಿಗಳು ಅಧಿಕಾರೇತರರು ಹಾಗೂ ಕಾರ್ಮಿಕರು ಎನ್ನುವ ಭೇದಭಾವದ ಮನೋಭಾವವಿಲ್ಲದಿರುವುದು, ಒಬ್ಬ ಡ್ರೈವರರಿಗೆ ಡ್ರೈವರ ಅಂತ ಕರೆಯುವ ಬದಲಿಗೆ ಅವನನ್ನು ಕ್ಯಾಪ್ಟನ್ ಎಂದು ಕರೆಯುತ್ತಿರುವುದು ಕೆಲಸಗಾರರ ಸ್ವಾಭಿಮಾನವನ್ನು ಹೆಚ್ಚಿಸಿದಂತಾಗುತ್ತದೆ. ಸಿಬ್ಬಂದಿಯವರು ತಮಗೆ ವಹಿಸಿರುವ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಅತ್ಯಂತ ಶ್ರದ್ಧೆಯಿಂದ ನಿರ್ವಹಿಸುವುದು ಗ್ರಾಹಕರಿಗೆ ಹಾಗೂ ಸಾರ್ವಜನಿಕರಗೆ ಇರುವ ಸಮಯದೊಳಗೆ ಉತ್ತಮ ಗುಣಮಟ್ಟದ ಸೇವೆ ಸಲ್ಲಿಸುವ ಮನೋಭಾವ ಅವರದ್ದಾಗಿದೆ. ಅವರ ಕೆಲಸಕ್ಕೆ ಅವರಿಗೆ ನೀಡುವ ಸಂಬಳಕ್ಕೆ ನ್ಯಾಯ ಕೊಡುತ್ತೇನೆ ಎಂಬ ಸಂಕಲ್ಪದೊಂದಿಗೆ ಕಾರ್ಯನಿರ್ವಹಿಸುವ ಪ್ರವೃತ್ತಿ ಅವರದ್ದಾಗಿದೆ. ಒಂದು ಉದಾಹರಣೆ ನೀಡುವುದಾದರೆ ಒಂದು ಬಸ್ ಅನ್ನು ಒಬ್ಬ ಡ್ರೈವರ್ ಓಡಿಸುತ್ತಾನೆ. ಬಸ್ಸಿನ ವೇಗ, ಬಸ್ಸು ಲೇನ್ ಶಿಸ್ತಿಗೆ ಹೊರತಾಗಿ ನಡೆಸುವುದು ಮತ್ತು ಸತತವಾಗಿ ಬಸ್ ನಡೆಸದೇ ಇರುವುದು ಅಂದರೆ 2 ಗಂಟೆಗೆ ಕನಿಷ್ಠ 15 ನಿಮಿಷದ ವಿಶ್ರಾಂತಿ, ನಗುಮುಖದ ಸೇವೆ ಇವೆಲ್ಲವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುವುದರಿಂದ ಸದರಿ ದೇಶಗಳು ಮುಂದುವರೆದ ರಾಷ್ಟ್ರಗಳ ಸಾಲಿನಲ್ಲಿವೆ. ತಮಗೆ ವಹಿಸಿದ ಕೆಲಸವನ್ನು ಅಷ್ಟೆ ಸಮಯದಲ್ಲಿ ಗುಣಾತ್ಮವಾಗಿ ಕಾರ್ಯನಿರ್ವಹಿಸುವ ಪ್ರವೃತ್ತಿಯವರಾಗಿದ್ದಾರೆ.

**ಸಹಕಾರ ಸಂಸ್ಥೆಗಳಿಗೆ ಭೇಟಿ :**

ವಿದೇಶ ಪ್ರವಾಸದ ಅವಧಿಯಲ್ಲಿ ಇಟಲಿ ದೇಶದ ಗ್ರಾಹಕರ ಸಹಕಾರ ಮಹಾಮಂಡಳ, ಪ್ಯಾರಿಸ್‌ನ ಸಹಕಾರಿ ಸೂಪರ್ ಮಾರ್ಕೆಟ್‌ಗಳಿಗೆ ಭೇಟಿ ನೀಡಲಾಯಿತು. ಎರಡು ಸಹಕಾರ ಸಂಸ್ಥೆಗಳಿಗೆ ಭೇಟಿ ನೀಡಿ ಅಧ್ಯಯನ ಮಾಡಿದ್ದಾರೆ. ಸಹಕಾರ ತತ್ವಗಳ ಅನುಷ್ಠಾನಕ್ಕೆ ಹಾಗೂ ಗ್ರಾಹಕರ ಸೇವೆಗೆ ಮೊದಲ ಆದ್ಯತೆ. ಈ ಎರಡು ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸದಸ್ಯ ಕೇಂದ್ರೀಕೃತವಾಗಿವೆ. ಸದಸ್ಯರ ಅನೇಕ ಸೇವೆಗಳನ್ನು ನೀಡಲಾಗುತ್ತಿದೆ. ವಿಶೇಷವೆಂದರೆ ಅಲ್ಲಿನ ಸದಸ್ಯರು ಲಾಭವನ್ನು ಡಿವಿಡೆಂಡ್ ರೂಪದಲ್ಲಿ ಪಡೆಯುವುದಿಲ್ಲ. ಸೇವೆಯ ರೂಪದಲ್ಲಿ ಪಡೆಯುತ್ತಿರುವುದು ವಿಶೇಷ. ಸದಸ್ಯರು ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯವರು ಅನ್ಯೋನ್ಯವಾಗಿ ಉತ್ತಮ ಬಾಂಧವ್ಯದಿಂದ ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸುತ್ತಿರುವುದನ್ನು ಗಮನಿಸಲಾಯಿತು.



## ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ಹಾಗೂ ವ್ಯವಹಾರ ಅಭಿವೃದ್ಧಿ ತರಬೇತಿ

**ಬೆಂಗಳೂರು :** ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ 2 ದಿನಗಳ ಆಡಳಿತ ಪರಿಣಿತಿ ಹಾಗೂ ವ್ಯವಹಾರ ಅಭಿವೃದ್ಧಿ ತರಬೇತಿಯನ್ನು ದಿನಾಂಕ 20 ಹಾಗೂ 21 ಮೇ 2025 ರಂದು ಬೆಂಗಳೂರಿನ ಸಂಯುಕ್ತ ಸಹಕಾರಿಯ ಸೌಹಾರ್ದ ತರಬೇತಿ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

### ವಿಷಯ ಜ್ಞಾನ ನಾಯಕತ್ವ ಬೆಳವಣಿಗೆಗೆ ಹಾಗೂ ಅಭಿವೃದ್ಧಿಗೆ ಪೂರಕ :
### - ಶ್ರೀ ಪಿ. ಶಶಿಧರ, ಸಹಕಾರ ಸಂಘಗಳ ಉಪನಿಬಂಧಕರು, ಬೆಂಗಳೂರು



ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಷಣ ಮಾಡಿದ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಪಿ. ಶಶಿಧರರವರು ಸಹಕಾರಿ ವ್ಯವಸ್ಥೆಯ ಬೆಳವಣಿಗೆ ಉತ್ತಮ ನಾಯಕತ್ವದ ಮೇಲೆ ಅವಲಂಬಿತವಾಗಿದೆ. ಉತ್ತಮ ನಾಯಕತ್ವ ಸಹಕಾರಿ ಕ್ಷೇತ್ರದ ಎಲ್ಲ ವಿಷಯಗಳ ಬಗ್ಗೆ ಜ್ಞಾನ ಪಡೆದಿರಬೇಕು ವೃತ್ತಿ ಪರತೆಯನ್ನು ಬೆಳೆಸಿಕೊಳ್ಳಬೇಕು. ಕೆಟ್ಟ ಸಂಘಗಳು ಏಕೇ ಹಾಳಾದವು ಯಾವ ದಾರಿ ಅನುಸರಿಸಿ ಹಾಳಾದವು ಎಂಬುದನ್ನು ತಿಳಿದು ಅದರಿಂದ ದೂರವಿದ್ದು ಉತ್ತಮ ವಿಷಯ ಹಾಗೂ ವ್ಯವಸ್ಥೆಗಳ ಅನುಷ್ಠಾನಗಳ ಆಯ್ಕೆ ಮಾಡಿ ಕಾರ್ಯನಿರ್ವಹಿಸಬೇಕು. ಅದಕ್ಕಾಗಿ ಇಂತಹ ತರಬೇತಿ ಕಾರ್ಯಕ್ರಮಗಳಲ್ಲಿ ಪಾಲ್ಗೋಳ್ಳುವುದು ಅವಶ್ಯಕ. ಸಂಯುಕ್ತ ಸಹಕಾರಿಯವರು ಉತ್ತಮ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಇದರ ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು.

### ನಿರ್ದೇಶಕರು ಸಹಕಾರಿ ವ್ಯವಸ್ಥೆಯ ಬೆನ್ನೆಲುಬು : ಶ್ರೀಮತಿ ಗಗನ ಕೆ.
### ಮಾನ್ಯ ಪೀಠಾಧಿಕಾರಿಗಳು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು




ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿ ಶ್ರೀಮತಿ ಗಗನ ಕೆ. ರವರು ದೀಪ ಬೆಳಗಿಸುವುದರೊಂದಿಗೆ ಉದ್ಘಾಟಿಸಿದರು. ಸಹಕಾರಿ ಸಂಸ್ಥೆಗಳ ನಿರ್ದೇಶಕರುಗಳು ಈ ಸಹಕಾರಿ ವ್ಯವಸ್ಥೆಯ ಬೆನ್ನೆಲುಗಳಂತೆ. ಎಲ್ಲರಿಗೂ ಸಮನಾದ ಜವಾಬ್ದಾರಿ ಇರುತ್ತದೆ. ಅದಕ್ಕಾಗಿ ಯೋಜನೆ, ಸಂಸ್ಥೆಯ ಬಗ್ಗೆ ಅರಿವು, ಉತ್ತಮ ಸಿಬ್ಬಂದಿ ನೇಮಕಾತಿ ಸಹಕಾರಿಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಉತ್ತಮ ನಿರ್ಣಯಗಳನ್ನು ತೆಗೆದುಕೊಳ್ಳುವುದು, ವ್ಯವಹಾರಗಳ ಹತೋಟಿ ಇತ್ಯಾದಿ ವಿಷಯಗಳಿಗೆ ಆದ್ಯತೆ ನೀಡುವುದು ಅಗತ್ಯ. ಕಲಿಕೆ ನಿರಂತರವಾಗಿ ವಿಷಯಗಳ ಬಗ್ಗೆ ಜ್ಞಾನ ಸಂಪಾದನೆ ಮಾಡಿಕೊಳ್ಳುತ್ತಿರಬೇಕು ಎಂದು ತಿಳಿಸಿದರು.



### ಹಕ್ಕು ಕರ್ತವ್ಯ ಹಾಗೂ ಜವಾಬ್ದಾರಿಗಳ ಪ್ರಾಮಾಣಿಕ ನಿರ್ವಹಣೆಗೆ ಅಗತ್ಯ.
### : ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಮಾತನಾಡಿ ಈ ದೇಶದಲ್ಲಿ ಸಹಕಾರ ಕ್ಷೇತ್ರ ಬೃಹದಾಕಾರವಾಗಿ ಬೆಳೆದಿದೆ. ಅದರಂತೆ ಕರ್ನಾಟಕದಲ್ಲೂ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಬೆಳೆಯುತ್ತಿದೆ. ಈ ಹಂತದಲ್ಲಿ ಈ ವ್ಯವಸ್ಥೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲ ನಿರ್ದೇಶಕರ ಮೇಲಿದೆ. ಅದಕ್ಕಾಗಿ ನಮ್ಮ ಹಕ್ಕು ಕರ್ತವ್ಯಗಳ ಹಾಗೂ ಜವಾಬ್ದಾರಿಗಳ ಅರಿವು ಹಾಗೂ ಪುನರ್ ಮನನ ಆಗಿಂದ್ದಾಗ್ಗೆ ಮಾಡಿಕೊಳ್ಳುತ್ತಿರಬೇಕು. ಅದಕ್ಕಾಗಿ ಸಂಯುಕ್ತ ಸಹಕಾರಿ ಪ್ರತಿವರ್ಷ ಇಂತಹ ಕಾರ್ಯಕ್ರಮಗಳನ್ನು ರಾಜ್ಯ, ಪ್ರಾಂತೀಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಏರ್ಪಡಿಸುತ್ತ ಬಂದಿದೆ ಎಂದು ತಿಳಿಸಿದರು.



## ಸಹಕಾರಿಗಳು ತರಬೇತಿಯ ಪ್ರಯೋಜನ ಪಡೆಯುವುದು ಅಭಿವೃದ್ಧಿಗೆ ಪೂರಕ. : ಶ್ರೀ ಬಿ.ಎಸ್.ಗುಂಡೂರಾವ, ಮಾನ್ಯ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡೂರಾವರವರು ಮಾತನಾಡಿ ಸೌಹಾರ್ದ ಸಹಕಾರಿ ಸಂಘಗಳ ನಿರ್ದೇಶಕರು ತರಬೇತಿ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸುವುದರಿಂದ ಅವರ ಜ್ಞಾನದ ಮಟ್ಟ ಹೆಚ್ಚಾಗುತ್ತದೆ. ಪ್ರಚಲಿತ ವಿಷಯಗಳ ಬಗ್ಗೆ ಅರಿವು ಹೆಚ್ಚುತ್ತದೆ ಸಹಕಾರಿ ಕ್ಷೇತ್ರ ಇನ್ನೂ ಹೆಚ್ಚು ಬಲವಾಗಿ ಬೇಳೆಯುತ್ತದೆ ಎಂದು ತಿಳಿಸಿದರು.

## ಸಹಕಾರಿ ಕ್ಷೇತ್ರದ ಅವಕಾಶಗಳ ಸದುಪಯೋಗಕ್ಕೆ ತರಬೇತಿ ಪ್ರಾಮುಖ್ಯತೆಯನ್ನು ನೀಡುತ್ತದೆ. : ಶ್ರೀ ಶ್ರೀಧರ, ಮಾನ್ಯ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಶ್ರೀಧರ ರವರು ಮಾತನಾಡಿ ಸಹಕಾರ ಕ್ಷೇತ್ರದಲ್ಲಿ ಜನಸೇವೆಗಾಗಿ ಸಾಕಷ್ಟು ಅವಕಾಶಗಳಿವೆ. ತರಬೇತಿಯಲ್ಲಿ ಸಹಕಾರ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳ ಬಗ್ಗೆ ಅನೇಕ ವಿಷಯಗಳನ್ನು ತಿಳಿಸುವ ವ್ಯವಸ್ಥೆ ಇದೆ. ತಾವುಗಳು ಸಕ್ರೀಯವಾಗಿ ಭಾಗವಹಿಸಬೇಕು ಎಂದು ತಿಳಿಸಿದರು. ಪ್ರಾರಂಭದಲ್ಲಿ ಶ್ರೀಮತಿ ದಿವ್ಯಾರವರಿಂದ ಪ್ರಾರ್ಥನೆಯಾದ ನಂತರ ಬೆಂಗಳೂರು ಪ್ರಾಂತೀಯ ಅಧಿಕಾರಿ ಶ್ರೀ ಶ್ರೀಧರ ರವರು ಗಣ್ಯರನ್ನು ಹಾಗೂ ಪ್ರತಿನಿಧಿಗಳನ್ನು ಸ್ವಾಗತಿಸಿದರು.



## ನಿರ್ದೇಶಕರು ಶಿಸ್ತಿನಿಂದ ಹಾಗೂ ವೃತ್ತಿಪರರಾಗಿ ಕಾರ್ಯನಿರ್ವಹಿಸಿ. : ಶ್ರೀ ಬಿ. ಹೆಚ್ ಕೃಷ್ಣಾರೆಡ್ಡಿ, ನಿಕಟಪೂರ್ವ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಮಾತನಾಡಿ ಸಹಕಾರ ಸಂಸ್ಥೆಯನ್ನು ದೊಡ್ಡದಾಗಿ ಬೆಳೆಸಲು ಹೋಗಿ ಹಳ್ಳಕ್ಕೆ ಬೀಳುವಂತಾಗಬಾರದು. ಸಹಕಾರಿಗಳು ಶಿಸ್ತಿನಿಂದ ವೃತ್ತಿಪರತೆಯಿಂದ ಕಾರ್ಯನಿರ್ವಹಿಸಿದಾಗ ಸಹಕಾರ ಕ್ಷೇತ್ರ ಉತ್ತಮವಾಗಿ ಬೆಳೆಯಲು ಸಾಧ್ಯವಾಗುತ್ತದೆ. ತಂತ್ರಜ್ಞಾನವನ್ನು ಹೊಂದಿರುವ ದಕ್ಷ ಸಿಬ್ಬಂದಿಯವರನ್ನು ನೇಮಕ ಮಾಡಿಕೊಳ್ಳಿ. ಸದಸ್ಯರಿಗೆ ಉತ್ತಮ ಸೇವೆ ನೀಡಿ. ಸಹಕಾರಿಯ ಆದಾಯ ಹೆಚ್ಚಿಸಬೇಕು. ಸಹಕಾರಿ ಸಂಸ್ಥೆಗಳಿಗೆ ಪ್ರವಾಸ ಮಾಡಿ ಅಧ್ಯಯನ ಮಾಡಿ ಅಲ್ಲಿಯ ಒಳ್ಳೆಯದನ್ನು ನೀವು ರೂಡಿಸಿಕೊಳ್ಳಿ ಮಹಿಳೆಯರಿಗೆ ಹಾಗೂ ಯುವಕರಿಗೆ ಹೆಚ್ಚಿನ ಆದ್ಯತೆ ನೀಡಿ ಎಂದು ಕರೆ ನೀಡಿದರು.

## ಸಮಾರೋಪ ಕಾರ್ಯಕ್ರಮ



ಕಾರ್ಯಕ್ರಮದ ಸಮಾರೋಪ ಕಾರ್ಯಕ್ರಮವನ್ನು ದಿನಾಂಕ 21–5–2025 ರಂದು ಸಂಜೆ 4–00 ಗಂಟೆಗೆ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ವಹಿಸಿದ್ದರು. ಸಮಾರೋಪ ಭಾಷಣಕಾರರಾಗಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನಕುಮಾರರವರು ಆಗಮಿಸಿದ್ದರು. ಸ್ವಾಗತವನ್ನು ಸಂಯುಕ್ತ ಸಹಕಾರಿಯ ಸಹಪ್ರಧಾನ ವ್ಯವಸ್ಥಾಪಕ ಶ್ರೀ ರಾಜಶೇಖರ ಹೂಗಾರರವರು ನೆರವೇರಿಸಿದರು. ಪ್ರಾರ್ಥನೆಯನ್ನು ಶ್ರೀಮತಿ ವಿಜಯಶ್ರೀಯವರು ನಡೆಸಿಕೊಟ್ಟರು.



## ರಜತ ಮಹೋತ್ಸವದ ಸಂಭ್ರಮದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ. : ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಹೇಳುತ್ತ ಪ್ರತಿವರ್ಷ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಈ ರೀತಿಯ ಆಡಳಿತ ಪರಿಣಿತಿ ಹಾಗೂ ವ್ಯವಹಾರ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ವರ್ಷ ಸೌಹಾರ್ದ

ಸಹಕಾರಿ ಕ್ಷೇತ್ರದ ರಜತ ಮಹೋತ್ಸವದ ವರ್ಷವಾಗಿದೆ. ಸಹಕಾರಿಗಳು ಹೆಚ್ಚಿನ ಉತ್ಸಾಹದಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ್ದಾರೆ ಎಂದು ತಿಳಿಸಿ ಈ ಎರಡು ದಿನಗಳ ಸಮಗ್ರ ಕಾರ್ಯಕ್ರಮದ ವಿವರವನ್ನು ಸಭೆಗೆ ತಿಳಿಸಿದರು.

## ತರಬೇತಿ ಶಿಸ್ತು ಬದ್ಧತೆಯನ್ನು ಹೆಚ್ಚಿಸುತ್ತದೆ. : ಶ್ರೀ ಎ.ಆರ್.ಪ್ರಸನ್ನಕುಮಾರ್, ಮಾನ್ಯ ಉಪಾಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



ಸಮಾರೋಪ ಭಾಷಣ ಮಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರರವರ ಮಾತನಾಡಿ ತರಬೇತಿಯಿಂದ ಹಲವಾರು ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ವಿಶೇಷವಾಗಿ ಶಿಸ್ತುಬದ್ಧತೆಯನ್ನು ಮೂಡಿಸುತ್ತದೆ. ಸಹಕಾರಿಯ ಅಭಿವೃದ್ಧಿಗೆ ಅಳವಡಿಸಿಕೊಳ್ಳಬಹುದಾದ ವಿಷಯಗಳ ಬಗ್ಗೆ ಜ್ಞಾನ ಹೆಚ್ಚಿಸುತ್ತದೆ. ನಿರ್ದೇಶಕರು ಸಹಕಾರಿ ಸಂಸ್ಥೆಯ ಟ್ರಸ್ಟ್‌ಗಳ ಇದ್ದ ಹಾಗೆ. ಅಭಿವೃದ್ಧಿಯ ಜವಾಬ್ದಾರಿ ನಮ್ಮ ಮೇಲೆ ಇದೆ. ಸಹಕಾರಿ ಕ್ಷೇತ್ರಕ್ಕೆ ಭದ್ರವಾದ ನೆಲೆ ಇದೆ. ಇದನ್ನು ಅಧ್ಯಯನ ಮಾಡಿ ಇದನ್ನು ಬೆಳೆಸುವ ಕಾಯಕ ನಮ್ಮದಾಗಬೇಕು. ಸದಸ್ಯರ ಹಿತ ರಕ್ಷಣೆಗೆ ಸದಸ್ಯರಿಗೆ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವಂತಾಗಬೇಕು. ಸೌಹಾರ್ದ ಸಹಕಾರಿ ಕ್ಷೇತ್ರ ವಿಶ್ವಕ್ಕೆ ಮಾದರಿಯಂತಾಗಿಸುವ ಮಹತ್ವದ ಜವಾಬ್ದಾರಿ ನಿಮ್ಮ ಮೇಲೆ ಇದೆ ಎಂದು ತಿಳಿಸಿದರು.

ತರಬೇತಿ ಅಧಿಕಾರಿ ಶ್ರೀ ಬಾಬು ಪಠಾಣರವರು ವಂದನಾರ್ಪಣೆ ನೆರವೇರಿಸಿದರು. ಈ ತರಬೇತಿ ಶಿಬಿರದಲ್ಲಿ 13 ಜಿಲ್ಲೆಗಳಿಂದ 42 ಸೌಹಾರ್ದ ಸಹಕಾರಿಗಳಿಂದ 69 ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಂವಾದ ಕಾರ್ಯಕ್ರಮ





ತರಬೇತಿ ಕಾರ್ಯಕ್ರಮದ ಅಂಗವಾಗಿ ಶಿಬಿರಾರ್ಥಿಗಳಿಗೆ ಕ್ಷೇತ್ರದ ಉತ್ತಮ ಸೌಹಾರ್ದ ಸಕಾರಿಗಳು ಬೆಳೆದು ಬಂದ ದಾರಿಯನ್ನು ಅವರು ಅನುಸರಿಸಿದ ರೀತಿ ನೀತಿ ನಿಯಮಗಳನ್ನು ಪರಿಚಯಿಸುವುವುದಕ್ಕಾಗಿ ಹೆಚ್ಚಿನ ಮಾಹಿತಿಯನ್ನು ನೀಡುವುದಕ್ಕಾಗಿ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಸಂವಾದ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ನಡೆಸಿಕೊಟ್ಟರು.

ಬೆಂಗಳೂರಿನ ಉದಯ ಸೌಹಾರ್ದ ಸಹಕಾರಿಯ ಶ್ರೀ ಎನ್ ಚಂದ್ರಶೇಖರವರು, ಪಾವಗಡ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಶ್ರೀ ದಯಾಕರ ರೆಡ್ಡಿಯವರು, ಕಲ್ಯಾಣ ಕರ್ನಾಟಕ ಸೌಹಾರ್ದ ಸಹಕಾರಿಯ ಶ್ರೀ ವಿ.ಬಿ.ಪಾಟೀಲರವರು, ಉದಯರವಿ ಸೌಹಾರ್ದ ಸಹಕಾರಿಯ ಶ್ರೀ ರಾಜಣ್ಣ ಸ್ನೇಹ ಸಂಗಮ ಸೌಹಾರ್ದ ಸಹಕಾರಿಯ ಶ್ರೀ ಬಿ.ಎಸ್. ಮಂಜುನಾಥ ಇವರು ನಾಗನೂರ ಅರ್ಬನ್ ಸೌಹಾರ್ದ ಸಹಕಾರಿಯ ಶ್ರೀ ಬಸವರಾಜರವರು ತಮ್ಮ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ತಿಳಿಸಿದರು. ಪ್ರತಿನಿಧಿಗಳು ಅವರ ಜೊತೆಗೆ ಅನೇಕ ವಿಷಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು. **ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬ ಅತಿಥಿಗಣ್ಯರು ಸಹಕಾರಿಗಳಿಗೆ ಈ ಕೆಳಕಂಡಂತೆ ಸಂದೇಶವನ್ನು ನೀಡಿದರು.**

- ಆಡಳಿತದಲ್ಲಿ ಪಾರದರ್ಶಕತೆ ಅಗತ್ಯ. – **ಶ್ರೀ ಬಿ.ಹೆಚ್. ದಯಾಕರೆಡ್ಡಿ**
- ಸಹಕಾರಿ ಕ್ಷೇತ್ರದ ಬಗ್ಗೆ ಜನರಿಗೆ ವಿಶ್ವಾಸಾರ್ಹತೆ ಹೆಚ್ಚಿಸಬೇಕು ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿಯವರು ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸಬೇಕು. – **ಶ್ರೀ ಎನ್ ಚಂದ್ರಶೇಖರ.**
- ಆಡಳಿತ ಮಂಡಳಿಯವರು ಸಿಬ್ಬಂದಿಯವರಿಗ ಹೆಚ್ಚಿನ ಸೌಲಭ್ಯ ನೀಡಿ ಉತ್ತಮ ಕಾರ್ಯನಿರ್ವಹಣೆಗಾಗಿ ಪ್ರೇರೇಪಿಸುವ ಕಾರ್ಯವಾಗಬೇಕು. – **ಶ್ರೀ ವಿ.ಬಿ.ಪಾಟೀಲ್**
- ಆಡಳಿತದಲ್ಲಿ, ನಿರ್ಣಯಗಳಲ್ಲಿ, ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಪ್ರತಿಯೊಂದು ಹಂತದಲ್ಲಿ ಸ್ಪಷ್ಟತೆ ಇರಬೇಕು. – **ಶ್ರೀ ರಾಜಣ್ಣ**
- ಸಹಕಾರಿ ಕ್ಷೇತ್ರದ ವಿಶ್ವಾಸಾರ್ಹತೆಗೆ ಹೆಚ್ಚು ಒತ್ತು ನೀಡಬೇಕು. – **ಶ್ರೀ ಮಂಜುನಾಥ**
- ಆಡಳಿತ ಮಂಡಳಿ, ಸದಸ್ಯರು ಹಾಗೂ ಸಿಬ್ಬಂದಿಯವರೆಲ್ಲರೂ ಒಟ್ಟಾಗಿ ಕಾರ್ಯನಿರ್ವಹಿಸಬೇಕು – **ಶ್ರೀ ಬಸವರಾಜ.**

## ಇಫ್ಕೋ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಡಾ. ಯು. ಎಸ್. ಅವಸ್ಥಿ ಭೇಟಿ



**ಬೆಂಗಳೂರು :** ದಿನಾಂಕ 15.05.2025 ರಂದು ಭಾರತದ ಅತ್ಯಂತ ಶ್ರೇಷ್ಠ ಬಹುರಾಜ್ಯ ಸಹಕಾರಿ ಸಂಸ್ಥೆಯಾದ ಇಫ್ಕೋ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಡಾ. ಯು ಎಸ್ ಅವಸ್ಥಿ ಇವರು ಬೆಂಗಳೂರಿಗೆ ಕಾರ್ಯನಿಮಿತ್ತ ಆಗಮಿಸಿದಾಗ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಪುಷ್ಪಗುಚ್ಛ ಹಾಗೂ ಸಹಕಾರಿ ಶಾಲನ್ನು ಹೊದಿಸಿ ಸನ್ಮಾನಿಸಲಾಯಿತು. ಸೌಹಾರ್ದ ಸಹಕಾರಿ ಚಳುವಳಿ ಮತ್ತು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡಿ, ಮುಂದಿನ ಬಾರಿ ಬೆಂಗಳೂರು ಪ್ರವಾಸದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡುವಂತೆ ವಿನಂತಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರ ಭಾರತಿಯ ಪ್ರಮುಖರಾದ ಶ್ರೀ ರಮೇಶ ವೈದ್ಯ, ಡಾ. ಯೋಗೇಂದ್ರ ಕುಮಾರ, ಡೈರೆಕ್ಟರ್ ಮಾರ್ಕೆಟಿಂಗ್, ಇಫ್ಕೋ ಹಾಗೂ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ, ಅಧಿಕಾರಿಯಾದ ಶ್ರೀ ಮಹಾಂತಪ್ಪ ಇವರು ಉಪಸ್ಥಿತರಿದ್ದರು.

## ವಿಷಯಾಧಾರಿತ ತರಬೇತಿ



**ಕಲಬುರ್ಗಿ :** ದಿನಾಂಕ 07.05.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಪ್ರಾಂತೀಯ ಕಛೇರಿ ಕಲಬುರಗಿಯ ತರಬೇತಿಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಕೇಂದ್ರ ಸಹಕಾರ ಬ್ಯಾಂಕ್ ನ ಉಪಾಧ್ಯಕ್ಷರಾದ ಶ್ರೀ ಸುರೇಶ ಸಜ್ಜನರವರು ನೆರವೇ–ರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು. ಮುಖ್ಯಅತಿಥಿಗಳಾಗಿ ಶ್ರೀ ಮಲ್ಲಿಕಾರ್ಜುನ ಮಾನ್ಯ ನೋಂದಣಾಧಿಕಾರಿಗಳು, ನೋಂದಣೀ ಮತ್ತು ಮುದ್ರಾಂಕ ಇಲಾಖೆ ಕಲಬುರಗಿ, ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್ .ಎಸ್ ಪಾಟೀಲರವರು ಲೆಕ್ಕಪರಿಶೋಧನಾ ಇಲಾಖೆಯ ಮಾನ್ಯ ಸಹಾಯಕ ನಿರ್ದೇಶಕರಾದ ಶ್ರೀ ಶರಣಬಸವ ಮಡೋಳೆಯವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಪ್ರಾರ್ಥನೆಯನ್ನು ಸೌಮ್ಯ ಕುಲಕರ್ಣಿ ಇವರು ಹಾಡಿದರು. ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನುಡಿದರು. ಸ್ವಾಗತವನ್ನು ಶ್ರೀ ವೀರಶೆಟ್ಟಿ ಕೆ ಯವರು ಕೋರಿದರು. ನಿರೂಪಣೆಯನ್ನು ಶ್ರೀ ಶಿವಕಾಂತ ರವರು ನಿರೂಪಿಸಿದರು. ಈ ತರಬೇತಿಯಲ್ಲಿ 73 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿ ಪ್ರಯೋಜನ ಪಡೆದರು.



**ಬಳ್ಳಾರಿ :** ದಿನಾಂಕ 17.05.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಹೊಟೇಲ್ ನಕ್ಷತ್ರಾದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹನುಮಂತಯ್ಯಶೆಟ್ಟಿ ವಹಿಸಿದ್ದರು. ಮುಖ್ಯಅತಿಥಿಗಳಾಗಿ ಮೇಘ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಸತ್ಯನಾರಾಯಣ ಹಾಗೂ ಮಟ್ಟಪ್ಪ ಸೌಹಾರ್ದ ಸಹಕಾರಿಯ ಅದ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ವೇದಿಕೆಯಲ್ಲಿ ಉಪಸ್ಥಿತ–ರಿದ್ದರು. ಸ್ವಾಗತ ನುಡಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರವಿಕುಮಾರವರು ನುಡಿದರು. ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಕೋರಿದರು. ನಿರೂಪಣೆಯನ್ನು ಶ್ರೀ ವೀರಶೆಟ್ಟಿ ಕೆ ಯವರು ನಿರೂಪಿಸಿದರು. ಲೆಕ್ಕಪರಿಶೋಧನಾ ಪೂರ್ವ ತಯಾರಿಯ ಕುರಿತು ಮಾಹಿತಿ ನೀಡಿದರು. ತರಬೇತಿಯಲ್ಲಿ ಬಳ್ಳಾರಿ ಜಿಲ್ಲೆಯ 51 ಸಹಕಾರಿಗಳಿಂದ 73 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



**ಬೆಂಗಳೂರು** : ದಿನಾಂಕ 16.05.2025ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಹೊಸ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಪ್ರವೇಶ ತರಬೇತಿಯನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಕರಾದ ಶ್ರೀ ಬಿ.ಎಸ್. ಗುಂಡುರಾವ್ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ಇದರ ಅಧ್ಯಕ್ಷರಾದ ಶ್ರೀ ವೈ. ಕುಮಾರ್ ರವರು, ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಧುಕರ ಹೆಗ್ಡೆ, ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ಹಾಗೂ ಶ್ರೀ ಹೆಚ್.ಎಸ್. ನಾಗರಾಜಯ್ಯ, ಅಪರ ನಿಬಂಧಕರು(ನಿವೃತ್ತ) ಬೆಂಗಳೂರು ಇವರು ಭಾಗವಹಿಸಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್, ಶ್ರೀ ಲಕ್ಷ್ಮೀಕಾಂತ್ ಎ.ಎಮ್. ಶ್ರೀ ಅನಿಲ್ ಕುಮಾರ್ ಎಮ್. ಕಿರಿಯ ಅಧಿಕಾರಿಗಳಾದ ಶ್ರೀ ಭವನ್‌ರಾವ್ ರವರು ಭಾಗವಹಿಸಿದ್ದರು. ಒಟ್ಟು 16 ಸೌಹಾರ್ದ ಸಹಕಾರಿಗಳಿಂದ 24 ಪ್ರತಿನಿಧಿಗಳು ಭಾಗವಹಿಸಿದ್ದರು.



**ಬಾಗಲಕೋಟೆ** : ದಿನಾಂಕ 13.05.2025 ರಂದು ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ, ಬೀಳಗಿ, ಹುನಗುಂದ, ಇಲಕಲ್, ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ, ನವನಗರ, ಬಾಗಲಕೋಟೆ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಭಾರತಿ, ಬಾಗಲಕೋಟೆಯ ಜಿಲ್ಲಾಧ್ಯಕ್ಷರಾದ ಡಾ॥ಎಮ್.ಎಸ್. ದಡ್ಡೆನ್ನವರ ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್. ಪಾಟೀಲ ಇವರು ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ವಿ. ಮಹೇಶ್ವರಪ್ಪ, ಜಂಟಿ ನಿರ್ದೇಶಕರು, ಲೆಕ್ಕ ಪರಿಶೋಧನಾ ಇಲಾಖೆ ಬಾಗಲಕೋಟೆ ಹಾಗೂ ಶ್ರೀ ಬಸವರಾಜ ಹೊಂಗಲ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ತರಬೇತಿಯಲ್ಲಿ ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುನೀಲ ಪತ್ತಾರ, ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ ಜಮಖಂಡಿ ಇವರು ಮಾಹಿತಿ ನೀಡಿದರು ಹಾಗೂ ಸಾಲ ವಸೂಲಾತಿ, ದಾವಾ ದಾಖಲಾತಿ ವಿಷಯದ ಕುರಿತು ಶ್ರೀ ಗಂಗಾರಾಮ ಕೊಳಾಪ್ಟೆ, ಅಧಿಕಾರಿಗಳು ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ಇವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 78 ಸೌಹಾರ್ದ ಸಹಕಾರಿಗಳಿಂದ 96 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.



**ಬಾಗಲಕೋಟೆ** : ದಿನಾಂಕ 14.05.2025 ರಂದು ಬಾಗಲಕೋಟೆ ಜಿಲ್ಲೆಯ ಜಮಖಂಡಿ, ಮುಧೋಳ, ರಬಕವಿ–ಬನಹಟ್ಟಿ, ಹಾಗೂ ತೇರದಾಳ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು ಹೋಟೆಲ್ ಗ್ರ್ಯಾಂಡ ಇನ್, ಬಸವೇಶ್ವರ ಸರ್ಕಲ್ ಹತ್ತಿರ, ಜಮಖಂಡಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿ ಮಾಜಿ ನಿರ್ದೇಶಕರಾದ ಶ್ರೀ ಸಾಗರ ಚವಜ ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ ಇವರು ವಹಿಸಿದ್ದರು. ತರಬೇತಿಯಲ್ಲಿ ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಯಾದ ಶ್ರೀ ಸುನೀಲ ಪತ್ತಾರ, ಸಹಾಯಕ ನಿರ್ದೇಶಕರು, ಲೆಕ್ಕಪ–ರಿಶೋಧನಾ ಇಲಾಖೆ ಜಮಖಂಡಿ ಇವರು ಮಾಹಿತಿ ನೀಡಿದರು ಹಾಗೂ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ವಿಷಯದ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಾಚಯ್ಯ ಹಿರೇಮಠ ಇವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 161 ಸೌಹಾರ್ದಗಳಿಂದ 189 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.



**ತುಮಕೂರು :** ದಿನಾಂಕ 29.05.2025ರಂದು ತುಮಕೂರು ಜಿಲ್ಲೆಯಲ್ಲಿ ಹೊಸದಾಗಿ ನೋಂದಣಿಗೊಂಡಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಪ್ರವೇಶ ತರಬೇತಿಯನ್ನು ಶಿವಾಜಿ ಸೌಹಾರ್ದ ಸಹಕಾರಿ ಸಂಘ ನಿ, ತುಮಕೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ಶಿವಾಜಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರಾವ್ ರವರು, ಬೆಂಗಳೂರು ಪ್ರಾಂತೀಯ ಅಧಿಕರಿಗಳಾದ ಶ್ರೀ ಶ್ರೀಧರ್ ರವರು, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ರಾಜಣ್ಣ ಕೆ.ಎಂ ಹಾಗೂ ಶ್ರೀ ಮಂಜುನಾಥ್ ಕೆ.ಎಸ್. ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ. ಎಸ್. ರವರು ನಡೆಸಿಕೊಟ್ಟರು. 32 ಸೌಹಾರ್ದ ಸಹಕಾರಿಗಲಿಂದ 58 ಪ್ರತಿನಿಧಿಗಳು ಭಾಗವಹಿಸಿದ್ದರು.



**ಚಿಕ್ಕಮಗಳೂರು :** ಚಿಕ್ಕಮಗಳೂರು ಜಿಲ್ಲಾ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಒಂದು ದಿನದ ವಿಷಯಧಾರಿತ ತರಬೇತಿ ಕಾರ್ಯಕ್ರಮವನ್ನು ಯಡಗೆರೆ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ (ಯಸ್ಕಾನ್) ಲಿಮಿಟೆಡ್, ಯಸ್ಕಾನ್ ವಾಣಿಜ್ಯ ಸಂಕೀರ್ಣ, ಟಿ.ಎಮ್ ರಸ್ತೆ ಕೊಪ್ಪ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಸ್ವಾಗತವನ್ನು ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಪ್ರವೀಣ್ ಕೆಸವೆ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಭಾರತಿ ಜಿ ಭಟ್ ಮಾನ್ಯ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ಶ್ರೀ ವೈ.ಎಸ್. ಸುಬ್ರಹ್ಮಣ್ಯ, ಮಾನ್ಯ ಅಧ್ಯಕ್ಷರು, ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ಇವರು ವಹಿಸಿದ್ದರು. ತರಬೇತಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಇದರ ನಿರ್ದೇಶಕರುಗಳಾದ ಶ್ರೀ ಪ್ರವೀಣ್ ಕೆಸವೆ, ಶ್ರೀ ಸತ್ಯಜಿತ್ ಶೆಟ್ಟಿ ಇವರುಗಳು ಉಪಸ್ಥಿತರಿದ್ದರು. ಪ್ರಥಮ ಅವಧಿಯಲ್ಲಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ ರವೀಂದ್ರನಾಥ್ ಇವರು ಸೌಹಾರ್ದ ಸಹಕಾರಿಗಳ ಲೆಕ್ಕಪ–ರಿಶೋಧನಾ ಪೂರ್ವಸಿದ್ಧತೆ ಕುರಿತು ಹಾಗೂ ಎರಡನೇ ಅವಧಿಯಲ್ಲಿ ಸನ್ನದು ಲೆಕ್ಕ ಪರಿಶೋಧಕರಾದ ಶ್ರೀ ವರುಣ್ ಭಟ್ ಇವರು ಜಿ.ಎಸ್.ಟಿ ,ಟಿ.ಡಿ.ಎಸ್ ಹಾಗೂ ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ಆದಾಯ ತೆರಿಗೆ ವಿಷಯದ ಕುರಿತು ಉಪನ್ಯಾಸ ನೀಡಿದರು. ತರಬೇತಿಯ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಅಶೋಕ ಜಿ, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಹಾಸನ ಮತ್ತು ಚಿಕ್ಕಮಗಳೂರು ಇವರು ನಡೆಸಿಕೊಟ್ಟರು. ಹಾಗೂ ತರಬೇತಿ ಕಾರ್ಯಕ್ರಮದ ವಂದನಾರ್ಪಣೆಯನ್ನು ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಕೌಶಿಕ್ ರವರು ನಡೆಸಿಕೊಟ್ಟರು ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 26 ಸೌಹಾರ್ದ ಸಹಕಾರಿಗಳಿಂದ 26 ಮಂದಿ ಪ್ರತಿನಿಧಿಗಳು ಭಾಗವಹಿಸಿ ತರಬೇತಿಯ ಪ್ರಯೋಜನವನ್ನು ಪಡೆದುಕೊಂಡರು.



**ಹಾಸನ :** ದಿನಾಂಕ : 24.05.2025 ರಂದು ನಡೆದ ಹಾಸನ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಒಂದು ದಿನದ ವಿಷಯಧಾರಿತ ತರಬೇತಿ ಕಾರ್ಯಕ್ರಮವನ್ನು ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಭವನ, ಹಾಸನ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ್ ಎಸ್.ಕೆ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಇವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಯುತ ಹೆಚ್.ಎಂ ರೇವಣಯ್ಯ, ಅಧ್ಯಕ್ಷರು, ಪುಷ್ಪಗಿರಿ ಸೌಹಾರ್ದ ಸಹಕಾರಿ ಸಂಘ ನಿ., ಇವರು ನೆರವೇರಿಸಿದರು. ತರಬೇತಿ ಕಾರ್ಯಕ್ರಮದ ಅತಿಥಿಗಳಾಗಿ ಶ್ರೀ ಚಾಮರಾಜೇಗೌಡ, ಅಧ್ಯಕ್ಷರು, ಸ್ವರ್ಣಭಾರತಿ ಸೌಹಾರ್ದ ಸಹಕಾರಿ ಸಂಘ ನಿ., ಇವರು ಭಾಗವಹಿಸಿದ್ದರು. ಪ್ರಥಮ ಅವಧಿಯಲ್ಲಿ ಶ್ರೀ ರಘುನಂದನ್ ಕೆ ಸಲಹೆಗಾರರು, ಯಡಗೆರೆ ಸೌಹಾರ್ದ ಸಹಕಾರಿ ನಿ., ಕೊಪ್ಪ ಇವರು ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನಾ ಪೂರ್ವಸಿದ್ಧತೆ ಕುರಿತು

ಹಾಗೂ ಎರಡನೇ ಅವಧಿಯಲ್ಲಿ ಸಾಮಾನ್ಯ ಸಭೆ ನಡೆಸುವ ವಿಧಾನಗಳ ವಿಷಯದ ಕುರಿತು ಮಾನ್ಯ ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಉಪನ್ಯಾಸ ನೀಡಿದರು. ಹಾಗೂ ತೃತೀಯ ಅವಧಿಯಲ್ಲಿ ಶ್ರೀ ಶೇಖರ್. ಮೈಸೂರು ಇವರು ಸಾಲ ವಸೂಲಾತಿ, ಕಡತಗಳ ನಿರ್ವಹಣೆ ಮತ್ತು ದಾವ ಪಂಚಾಯಿತಿ ವಿಷಯದ ಕುರಿತು ಉಪನ್ಯಾಸ ನೀಡಿದರು. ತರಬೇತಿಯ ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆ ಯನ್ನು ಶ್ರೀ ಅಶೋಕ ಜಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಹಾಸನ ಇವರು ನಡೆಸಿಕೊಟ್ಟರು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 40 ಸೌಹಾರ್ದ ಸಹಕಾರಿಗಳಿಂದ 40 ಪ್ರತಿನಿಧಿಗಳು ಭಾಗವಹಿಸಿ ತರಬೇತಿಯ ಪ್ರಯೋಜನವನ್ನು ಪಡೆದುಕೊಂಡರು.



**ಚಿತ್ರದುರ್ಗ** : ದಿನಾಂಕ 28.05.2025ರಂದು ಚಿತ್ರದುರ್ಗ ಜಿಲ್ಲೆಯಲ್ಲಿ 2021ರ ನಂತರ ನೋಂದಣಿಗೊಂಡಿರುವ ಹೊಸ ಸೌಹಾರ್ದ ಸಹಕಾ–ರಿಗಳಿಗಾಗಿ ಪ್ರವೇಶ ತರಬೇತಿಯನ್ನು ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್, ಜೆಸಿಆರ್ ಬಡಾವಣೆ ಶಾಖೆ, ಚಿತ್ರದುರ್ಗ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆ ಹಾಗೂ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿ ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ವೀರಭದ್ರಬಾಬು ರವರು, ಉಪಾಧ್ಯಕ್ಷರಾದ ಶ್ರೀ ತಿಪ್ಪೇಸ್ವಾಮಿ ರವರು ಹಾಗೂ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ನಡೆಸಿಕೊಟ್ಟರು. ಸಂಯುಕ್ತ ಸಹಕಾರಿಯ ಕಿರಿಯ ಸಹಾಯಕರಾದ ಶ್ರೀ ಯೋಗೇಶ್ ರವರು ಉಪಸ್ಥಿತರಿದ್ದರು. 10 ಸೌಹಾರ್ದ ಸಹಕಾರಿಗಲಿಂದ 22 ಪ್ರತಿನಿಧಿಗಳು ಭಾಗವಹಿಸಿದ್ದರು. ತರಬೇತಿಯ ಸಂದರ್ಭದಲ್ಲಿ 1959ರ ಸಹಕಾರ ಸಂಘಗಳ ಕಾಯ್ದೆಯಿಂದ 1997ರ ಸೌಹಾರ್ದ ಸಹಕಾರಿ ಕಾಯ್ದೆಗೆ ಪರಿವರ್ತನೆಗೊಂಡಿರುವ ಶ್ರೀ ಗಾಯಿತ್ರಿ ಪತ್ತಿನ ಸೌಹಾರ್ದ ಸಹಕಾರಿ ನಿ, ಚಿತ್ರದುರ್ಗ ಸಹಕಾರಿಯ ಪರವಾಗಿ ಅಧ್ಯಕ್ಷರಾದ ಶ್ರೀ ಮಂಜುನಾಥ್ ಪಿ.ಎಸ್. ರವರಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಅಭಿನಂದನೆಗಳನ್ನು ಸಲ್ಲಿಸಲಾಯಿತು.



**ಹಾವೇರಿ** : ದಿನಾಂಕ 29.05.2025 ರಂದು ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ವಿಷಯಾಧಾ–ರಿತ ತರಬೇತಿಯನ್ನು ಹೋಟೆಲ್ ಶಿವಾ ರೇಸಿಡೆನ್ಸಿ, ಹಾವೇರಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಕೆ.ಶಿವಲಿಂಗಪ್ಪ ಇವರು ನೆರವೇ–ರಿಸಿದರು. ತರಬೇತಿಯ ಮೊದಲನೇಯ ಅವಧಿಯಲ್ಲಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ವಿಷಯದ ಕುರಿತು ಶ್ರೀ ಗಂಗಾರಾಮ ಕೊಳಾಪ್ಟೆ, ಅಧಿಕಾರಿಗಳು ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ಇವರು ಮಾಹಿತಿ ನೀಡಿದರು. ಎರಡನೇಯ ಅವಧಿಯಲ್ಲಿ ಕಛೇರಿಯ ಆಂತರಿಕ ನಿರ್ವಹಣೆ ವಿಷಯದ ಕುರಿತು ಶ್ರೀ ಚನ್ನಬಸವರಾಜ, ಮುಖ್ಯಸ್ಥರು ಪಾರ್ವತಿ ಸ್ವಯಂ ಸೇವಾ ಸಂಸ್ಥೆ, ಅಳ್ನಾವರ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಕಲ್ಮೇಶ ಎಸ್ ಎಂ ನಿರೂಪಿಸಿದರು.ಈ ತರಬೇತಿಯಲ್ಲಿ ಒಟ್ಟು 84 ಸೌಹಾರ್ದಗಳಿಂದ 94 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.



**ಉತ್ತರ ಕನ್ನಡ** : ದಿನಾಂಕ 29.05.2025 ರಂದು ಉತ್ತರ ಕನ್ನಡ ಜಿಲ್ಲೆಯ ಶಿರಸಿ, ದಾಂಡೇಲಿ, ಹಳಿಯಾಳ,ಜೋಯಿಡಾ, ಮುಂಡಗೋಡ, ಸಿದ್ದಾಪೂರ ಹಾಗೂ ಯಲ್ಲಾಪೂರ ತಾಲೂಕುಗಳ ಸೌಹಾರ್ದ ಸಹಕಾ–ರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು ವಿನಾಯಕ ಸಭಾ ಭವನ, ಸಾಮ್ರಾಟ ಅತಿಥಿ ಗೃಹ, ಶಿರಸಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ಇವರು ನೆರವೇರಿಸಿದರು. ತರಬೇತಿಯ ಮೊದಲನೇಯ ಅವಧಿಯಲ್ಲಿ ಕಛೇರಿಯ ಆಂತರಿಕ ನಿರ್ವಹಣೆ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ರಘುನಂದನ ಕೆ., ಇವರು ಉಪನ್ಯಾಸ ನೀಡಿದರು.

ಎರಡನೇಯ ಅವಧಿಯಲ್ಲಿ ದಾವಾ ದಾಖಲಾತಿ ಹಾಗೂ ಲೆಕ್ಕಪರಿಶೋಧನಾ ಪೂರ್ವ ಸಿದ್ಧತೆ ವಿಷಯದ ಕುರಿತು ಶ್ರೀ ರಘುನಂದನ ಕೆ., ಇವರು ಉಪನ್ಯಾಸ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸಂತೋಷಕುಮಾರ ಎಮ್. ಜೆ ಇವರು ಕಾರ್ಯಕ್ರಮನ್ನು ನಿರೂಪಿಸಿದರು.ಈ ತರಬೇತಿಯಲ್ಲಿ ಒಟ್ಟು 38 ಸೌಹಾರ್ದಗಳಿಂದ 46 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.



**ಉತ್ತರ ಕನ್ನಡ** : ದಿನಾಂಕ 30.05.2025 ರಂದು ಉತ್ತರ ಕನ್ನಡ ಜಿಲ್ಲೆಯ ಕುಮುಟಾ, ಹೊನ್ನಾವರ, ಕಾರವಾರ, ಭಟ್ಕಳ ಹಾಗೂ ಅಂಕೋಲಾ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು ಮಹಾಲಕ್ಷ್ಮೀ ಕಂಫರ್ಟ, ಕುಮಟಾ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ರಘುನಂದನ ಕೆ., ಇವರು ನೆರವೇರಿಸಿದರು. ತರಬೇತಿಯ ಮೊದಲನೇಯ ಅವಧಿಯಲ್ಲಿ ಕಛೇರಿಯ ಆಂತರಿಕ ನಿರ್ವಹಣೆ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ರಘುನಂದನ ಕೆ., ಇವರು ಉಪನ್ಯಾಸ ನೀಡಿದರು. ಎರಡನೇಯ ಅವಧಿಯಲ್ಲಿ ದಾವಾ ದಾಖಲಾತಿ ಹಾಗೂ ಲೆಕ್ಕಪರಿಶೋಧನಾ ಪೂರ್ವ ಸಿದ್ಧತೆ ವಿಷಯದ ಕುರಿತು ಶ್ರೀ ರಘುನಂದನ ಕೆ., ಇವರು ಉಪನ್ಯಾಸ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸಂತೋಷಕುಮಾರ ಎಮ್. ಜೆ ಇವರು ಕಾರ್ಯಕ್ರಮನ್ನು ನಿರೂಪಿಸಿದರು.ಈ ತರಬೇತಿಯಲ್ಲಿ ಒಟ್ಟು 108 ಸೌಹಾರ್ದಗಳಿಂದ 127 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.

## ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಕಛೇರಿ ಹಾಗೂ ತರಬೇತಿ ಕೇಂದ್ರ ಕಟ್ಟಡ ನಿರ್ಮಾಣ ಟೆಂಡರ್ ಅಧಿಸೂಚನೆ

**KARNATAKA STATE SOUHARDA FEDERAL CO - OPERATIVE LTD.,**
**Head Office :** # 68, Souharda Sahakari Soudha, 18th Cross Road, Margosa Road, Malleshwaram, Bengaluru-560055. **Reginal Office:** KSSFCL Shankar Mutt Road, 2nd Cross, Near Nataraja sabha Bhavana, Mysuru-570004. PH No:- 0821-2332299
**Website:www.souharda.coop. E-Mail: souharda@souharda.coop**

**NO: KSSFCL /BC/MYS/01/2025** **Date: 03.06.2025**

### SHORT-TERM TENDER NOTIFICATION

| Tender No | Description | Estimated Cost of Project | EMD & Tender Form Fee | Method of Tender | Tender Document & BOQ |
|---|---|---|---|---|---|
| **KSSFCL / BC/MYS/ 01/2025** | Proposed Construction of **Divisional Office & Training Centre** at Site # 41/B-2,466 Industrial Area Suburb 2nd Stage Khille Mohalla, Vishweswara Nagara, Mysuru-570008 | Rs.2.12Crore | Rs.2.12 Lakhs EMD + Form Fee Rs.2500/- | Two Cover System Technical & financial | Can be obtained from KSSFCL Official Website or At above mentioned Office Address |

1. Date of issue of the tender document : Date- **04.06.2025**
2. Pre Bidding Meeting : Date- **16.06.2025** by 4 PM at **Head Office KSSFCL Bengaluru.**
3. Last Date for Submission of Tender : Date- **20.06.2025** upto 5 pm
4. Opening Of technical Bid : Date-**21.06.2025** 11:30 am
5. Financial Bid Opening : Will be informed through Email to the Contractors Only Who are Eligible in Technical Bid.

**Note: 1.**EMD & Tender Form Fee DD in favour of Karnataka State Souharda Federal Coop Ltd., Bangalore. **2.**All Eligible PWD, CPWD & Private Contractors can Apply. **3.** All Rights are Preserved & hold by KSSFCL regarding Tender Process & Free to Take any Decision as per KSSFCL Board Directions. **4.**Interested Contractors should fill & submit the Tender Document, BOQ ,Supporting Documents along with EMD and form Fee DD on One Main Sealed Covers which consist Two Separate A4 Envelope Covers named as Technical & Financial. **5.** Details of Term and conditions are available in the tender documents which can be downloaded from our website **www.souharda.coop.** For any Clarification Contact: **8884466703.**

Place : Bengaluru
Date : 03.06.2025

**Sd/-**
**Managing Director**

## ಭೇಟಿ

**ಬೆಂಗಳೂರು :** ದಿನಾಂಕ 29.05.2025 ರಂದು ಸಂಯುಕ್ತ ಸಹಕಾ–ರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರನ್ನು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿಯಮಿತ ಇದರ ಅಧ್ಯಕ್ಷರಾದ ಶ್ರೀ ಗುರುರಾಜ್ ಬಿ.ಟಿ ರವರು ಹಾಗೂ ಉಪಾಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯ ರವರು ಹಾಗೂ ನಿರ್ದೇಶಕರಾದ ಶ್ರೀ ವೆಂಕಟೇಶ್ ಗೌಡ ರವರು ಭೇಟಿ ಮಾಡಿ ಒಕ್ಕೂಟದ ಕಾರ್ಯಚಟುವಟಿ–ಕೆಗಳ ಕುರಿತು ಚರ್ಚಿಸಲಾಯಿತು. ನಂತರ ಅವರನ್ನು ಸನ್ಮಾನಿಸಲಾಯಿತು.

**ಕಲಬುರಗಿ :** ದಿನಾಂಕ 24.05.2025ರಂದು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಸಂಯುಕ್ತ ಸಹಕಾರಿಯ ಕಲಬುರ್ಗಿ ಪ್ರಾಂತೀಯ ಕಛೇರಿಗೆ ಹಾಗೂ ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಅಭಿವೃದ್ಧಿ ಸಂಸ್ಥೆಗೆ ಭೇಟಿ ನೀಡಿದರು. ಈ ಸಂಸ್ಥೆಯ ಆಡಳಿತ ಮಂಡಳಿಯ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಕರ್ನಾಟಕ ಸೌಹಾರ್ದ ಸಹಕಾರಿಯ ಅಧಿನಿಯ 1997ರ ಕಾಯ್ದೆಯ ಕುರಿತು ಮಾಹಿತಿ ನೀಡಿದರು ಹಾಗೂ ಕರ್ನಾಟಕ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯಿದೆ ಬೆಳೆದು ಬಂದ ರೀತಿ ಹಾಗೂ ಸೌಹಾರ್ದ ಸಹಕಾರಿಗಳ ಯಶಸ್ಸಿನ ಬಗ್ಗೆ ಎಲ್ಲಾ ಉಪಸ್ಥಿತರಿದ್ದ ಆಡಳಿತ ಮಂಡಳಿ ಸದಸ್ಯರಿಗೆ ಹಾಗೂ ಪದಾಧಿಕಾರಿಗಳಿಗೆ ತಿಳಿಸಿಕೊಟ್ಟರು ಸೌಹಾರ್ದ ಸಹಕಾರಿ ಕಾಯಿದೆ ಅಡಿಯಲ್ಲಿ ಸಹಕಾರಿ ಸಂಘ ಸ್ಥಾಪಿಸಲು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶರಣಬಸಪ್ಪಾ ಎಂ. ಪಪ್ಪಾ ಹಾಗೂ ಉಪಾಧ್ಯಕ್ಷರಾದ ಶ್ರೀ ಶಿವರಾಜ ವಿ. ಇಂಗಿನಶೆಟ್ಟಿ, ಕಲಬುರ್ಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಎಸ್.ಎಸ್. ಪಾಟೀಲ, ಸಂಯುಕ್ತ ಸಹಕಾರಿಯ ಕಲಬುರ್ಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆ ಉಪಸ್ಥಿತರಿದ್ದರು.

**ಮಂಡ್ಯ :** ದಿನಾಂಕ : 22.05.2025ರಂದು ಕೆ ಆರ್ ಪೇಟೆ ತಾಲೂಕು ಶ್ರೀ ಶಿವಜ್ಯೋತಿ ಗಾಣಿಗರ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಕೆ. ಆರ್.ಪೇಟೆ ಈ ಸಹಕಾರಿಗೆ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರರವರು ಭೇಟಿ ನೀಡಿ ಸಹಕಾರಿಯ ಕಾರ್ಯ ಚಟುವಟಿಕೆಗಳ ಬಗ್ಗೆ ಹಾಗೂ ಸಹಕಾರಿಯ ಬೆಳವಣಿಗೆಯ ಬಗ್ಗೆ ಮಾಹಿತಿಯನ್ನು ಪಡೆದು ಮುಂದಿನ ಕಾರ್ಯನಿರ್ವಹಣೆ ಕುರಿತಂತೆ ಮಾರ್ಗದರ್ಶನ ಮಾಡಿದರು. ಈ ಸಂದರ್ಭದಲ್ಲಿ ಈ ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಲರಾಮ್ ಎನ್ ರವರು ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿ ಸ್ಥಾಪನೆಗಾಗಿ ಪ್ರವರ್ತಕರ ಸಭೆ

**ಕೊಡಗು :** ದಿನಾಂಕ: 06.05.2025 ರಂದು ನೂತನ ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸುವ ದೃಷ್ಟಿಯಿಂದ ಕುಶಾಲನಗರದಲ್ಲಿ ಶ್ರೀ ಫಿಲಿಪ್ಸ್ ರವರ ಅಧ್ಯಕ್ಷತೆಯಲ್ಲಿ ಉದ್ದೇಶಿತ ಕೊಡಗು ಸರ್ಕಾರಿ ನೌಕರರ ಸೌಹಾರ್ದ ಸಹಕಾರಿ ಸಂಘ ನಿ., ಇದರ ಪ್ರವರ್ತಕರ ಸಭೆಯನ್ನು ಆಯೋಜಿಸಲಾಗಿತ್ತು. ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ ಒಟ್ಟು 11 ಮಂದಿ ಪ್ರವರ್ತಕರು ಭಾಗವಹಿಸಿದ್ದರು.

**ಮೈಸೂರು :** ದಿನಾಂಕ: 13.05.2025 ನೂತನ ಸೌಹಾರ್ದ ಸಹಕಾ–ರಿಯನ್ನು ಪ್ರಾರಂಭಿಸುವ ದೃಷ್ಟಿಯಿಂದ ಮೈಸೂರು ಟಿ.ಕೆ.ಬಡಾವಣೆಯಲ್ಲಿ ಶ್ರೀಮತಿ ಪ್ರಮೀಳಾ ರವರ ಅಧ್ಯಕ್ಷತೆಯಲ್ಲಿ ಉದ್ದೇಶಿತ ಮೈಸೂರು ಮಹಿಳಾ ಉದ್ಯಮಶೀಲತೆ ಸೌಹಾರ್ದ ಸಹಕಾರಿ ಸಂಘ ಇದರ ಪ್ರವರ್ತಕರ ಸಭೆಯನ್ನು ಆಯೋಜಿಸಲಾಗಿತ್ತು. ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ ಒಟ್ಟು 11 ಮಂದಿ ಪ್ರವರ್ತಕರು ಭಾಗವಹಿಸಿದ್ದರು.

**ಮೈಸೂರು :** ದಿನಾಂಕ: 17.05.2025 ನೂತನ ಸೌಹಾರ್ದ ಸಹಕಾ–ರಿಯನ್ನು ಪ್ರಾರಂಭಿಸುವ ದೃಷ್ಟಿಯಿಂದ ಮೈಸೂರು ದಟ್ಟಗಳ್ಳಿಯಲ್ಲಿ ಶ್ರೀ ಶ್ರೀ ಬಸವನಾಗಿದೇವ ಶರಣರು ರವರ ಅಧ್ಯಕ್ಷತೆಯಲ್ಲಿ ಪ್ರವರ್ತಕರ ಸಭೆಯನ್ನು ಆಯೋಜಿಸಲಾಗಿತ್ತು. ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಮಾಹಿತಿಯನ್ನು ನೀಡಿದ್ದರು. ಸದರಿ ಸಭೆಯಲ್ಲಿ ಒಟ್ಟು 14 ಜನ ಭಾಗವಹಿಸಿದ್ದರು.

---

**ತುಮಕೂರು :** ದಿನಾಂಕ 07.05.2025 ರಂದು ತುಮಕೂರು ಕಾರ್ಪೊರೇಟ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ, ಇದರ ಕಛೇರಿ ಬದಲಾವಣೆಯ ಪೂಜಾ ಕಾರ್ಯಕ್ರಮದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳಾದ ಶ್ರೀ ಉಮೇಶ್ ಎ.ಎಸ್‌ರವರು ಭಾಗವಹಿಸಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಗೆ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಸಹಕಾ–ರಿಯ ಅಧ್ಯಕ್ಷರಾದ ಶ್ರೀ ಈಶ್ವರ್ ಪ್ರಸಾದ್ ರವರು, ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀಮತಿ ಪಾರ್ವತಮ್ಮ ರವರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ದಿನಾಂಕ 03.06.2025 ಮತ್ತು 04.06.2025 ರಂದು ಸೌಹಾರ್ದ ಸಹಕಾರಿಗಳ ನಿರ್ದೇಶಕರಿಗಾಗಿ 2 ದಿನಗಳ "ಆಡಳಿತ ಪರಿಣಿತಿ ಮತ್ತು ವ್ಯವಹಾರ ಅಭಿವೃದ್ಧಿ ತರಬೇತಿಯನ್ನು "ಸೌಹಾರ್ದ ಸಹಕಾರಿ ಸೌಧ", ಮಾರ್ಗೋಸ ರಸ್ತೆ, ಮಲ್ಲೇಶ್ವರಂ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.
2. ದಿನಾಂಕ 17.06.2025 ರಿಂದ 21.06.2025 ರವರೆಗೆ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ 05 ದಿನಗಳ ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿಯನ್ನು ಬೆಂಗಳೂರಿನ ಆರ್‌ಐಸಿಎಂ, ಪದ್ಮನಾಭನಗರದಲ್ಲಿ ಹಮ್ಮಿಕೊಳ್ಳಲಾಗಿದೆ. ಅಭ್ಯರ್ಥಿಗಳ ನೋಂದಣಿಗಾಗಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯನ್ನು ಹಾಗೂ ಪ್ರಾಂತೀಯ ಕಛೇರಿಯ ಅಧಿಕಾರಿಗಳನ್ನು ಮತ್ತು ಕೇಂದ್ರ ಕಛೇರಿಯ ತರಬೇತಿ ವಿಭಾಗವನ್ನು ಸಂಪರ್ಕಿಸಲು ಕೋರಿದೆ.
3. ದಿನಾಂಕ 10.06.2025 ರಂದು ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಸಹಕಾರ ಹಾಗೂ ಯುವಕರು ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.
4. ದಿನಾಂಕ 24.06.2025 ರಂದು ಪಟ್ಟಣ ಸಹಕಾರ ಬ್ಯಾಂಕುಗಳ ಶಾಖಾ ವ್ಯವಸ್ಥಾಪಕರುಗಳಿಗಾಗಿ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.
5. ದಿನಾಂಕ 18.06.2025 ರಂದು ಸಂಯುಕ್ತ ಸಹಕಾರಿಯ ಅಧಿಕಾರಿಗಳಿಗೆ ಆರ್.ಬಿ.ಐ ಇವರಿಂದ Inspection ಕುರಿತು ತರಬೇತಿ.
6. ದಿನಾಂಕ 01.07.2025 ರಿಂದ 07.07.2025 ರವರೆಗೆ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ಅನ್ನು ಹಮ್ಮಿಕೊಳ್ಳಲಾಗುವುದು.

## ಮೇ 2025 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

### 1. ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಿರುವ ಕುರಿತು.

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ 05 ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಕಾಯ್ದೆ ಕಲಂ 38ಎ ರನ್ವಯ ಮೇ ತಿಂಗಳಲ್ಲಿ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

### 2. ಸೌಹಾರ್ದ ಸಹಕಾರಿಗಳಿಗೆ ಸಮಾಪನಾಧಿಕಾರಿ ನೇಮಕವಾಗಿರುವ ಕುರಿತು.

1. ನಂದಗೋಕುಲ ಸೌಹಾರ್ದ ಕ್ರೆಡಿಟ್ ಕೋ-ಅಪರೇಟಿವ್ ಲಿ., ಬೆಂಗಳೂರು.
2. ದಿ ರಾಜಾಜಿನಗರ ಸೌಹಾರ್ದ ಕ್ರೆಡಿಟ್ ಕೋ-ಅಪರೇಟಿವ್ ಲಿ., ಬೆಂಗಳೂರು.

ಸಹಕಾರಿಗಳಿಗೆ ದಿನಾಂಕ 03.05.2025ರಂದು ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು 1ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರು ಸೌಹಾರ್ದ ಅಭಿವೃದ್ಧಿ ಅಧಿಕಾರಿ (01 ಮತ್ತು 04 ವಲಯ) ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇವರನ್ನು ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

3. ಚನ್ನಗಿರಿ ಜನಸೇವಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಚನ್ನಗಿರಿ.
4. ಶ್ರೀ ಸರ್ವೇಶ್ವರ ಸೌಹಾರ್ದ ಸಹಕಾರಿ ನಿ., ದಾವಣಗೆರೆ.

ಸಹಕಾರಿಗಳಿಗೆ ದಿನಾಂಕ 15.05.2025ರಂದು ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು ದಾವಣಗೆರೆ ಇವರು ಸೌಹಾರ್ದ ಅಭಿವೃದ್ಧಿ ಅಧಿಕಾರಿ ದಾವಣಗೆರೆ ಜಿಲ್ಲೆ ಇವರನ್ನು ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

### 3.ಸಮಾಪನಾಧಿಕಾರಿ ಮಾರ್ಪಾಡು ಆದೇಶವಾಗಿರುವ ಕುರಿತು:

ವಿ-ಗೋಲ್ಡ್ ಸೌಹಾರ್ದ ಕೋ-ಆಪರೇಟಿವ್ ಲಿ., ಬೆಂಗಳೂರು ಸಹಕಾರಿಗೆ ಈ ಹಿಂದೆ ಸಮಾಪನಾಧಿಕಾರಿಯಾಗಿದ್ದ ಸಮಾಪನಾಧಿಕಾರಿಯು ವರ್ಗಾವಣೆಯಾಗಿರುವುದರಿಂದ ಸದರಿಯವರ ಬದಲಾಗಿ ವಿ-ಗೋಲ್ಡ್ ಸೌಹಾರ್ದ ಕೋ-ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ ಸಮಾಪನಾಧಿಕಾರಿಯಾಗಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ (01 ಮತ್ತು 04 ವಲಯ) ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇವರನ್ನು ದಿನಾಂಕ 14.05.2025ರಂದು ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರ ಮಾರ್ಪಾಡು ಆದೇಶ ಮಾಡಿರುತ್ತಾರೆ.

# ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿಯ ಸೌಹಾರ್ದ ಸಹಕಾರಿ ಸಂಘಗಳ ಉಪವಿಧಿಗಳ ತಿದ್ದುಪಡಿ ನೋಂದಾಯಿಸುವ ಸಂದರ್ಭದಲ್ಲಿ ಪರಿಗಣಿಸಬೇಕಾದ ಅಂಶಗಳ ಕುರಿತು ಸರ್ಕಾರದ ಸುತ್ತೋಲೆ

**ಕರ್ನಾಟಕ ಸರ್ಕಾರ**
**(ಸಹಕಾರ ಇಲಾಖೆ)**
**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ। ಅಲಿ ಅಸ್ಕರ ರಸ್ತೆ, ಬೆಂಗಳೂರು-560 052**

ಸಂಖ್ಯೆ:ಆರ್‌ಸಿಎಸ್/ಆರ್‌ಎಸ್‌ಆರ್/ಸೌಕಾ/116/2024-25 ದಿನಾಂಕ: 15-05-2025

## ಸುತ್ತೋಲೆ-280

ವಿಷಯ: ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿಯ ಸೌಹಾರ್ದ ಸಹಕಾರಿ ಸಂಘಗಳ ಉಪವಿಧಿಗಳ ತಿದ್ದುಪಡಿ ನೋಂದಾಯಿಸುವ ಸಂದರ್ಭದಲ್ಲಿ ಪರಿಗಣಿಸಬೇಕಾದ ಅಂಶಗಳ ಕುರಿತು

******

ಸಹಕಾರಿಯು ತನ್ನ ಕಾರ್ಯವ್ಯಾಪ್ತಿ ವಿಸ್ತರಣೆ ಹಾಗೂ ಇತರೆ ಉಪನಿಯಮಗಳ ತಿದ್ದುಪಡಿಗೆ ಪ್ರಸ್ತಾವನೆ ಸಲ್ಲಿಸಿದ ಸಂದರ್ಭದಲ್ಲಿ, ಸಕ್ಷಮ ಪ್ರಾಧಿಕಾರಿಗಳು ಪ್ರಸ್ತಾವನೆಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 11 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 4 ರ ಅನುಗುಣವಾಗಿ ಸಲ್ಲಿಸಿರುವ ಕುರಿತು ಪರಿಶೀಲಿಸುವುದರೊಂದಿಗೆ ಸಹಕಾರಿಗಳು ಈ ಕೆಳಗಿನ ಅಂಶಗಳನ್ನು ಅನುಸರಿಸುತ್ತಿರುವ ಕುರಿತು ಪರಿಶೀಲಿಸಿ ಖಾತರಿಪಡಿಸಿಕೊಂಡು ಅನುಮೋದಿಸತಕ್ಕದ್ದು:-

1. ಸಹಕಾರಿಯ ಅಡಾವೆ ಪತ್ರಿಕೆಯನ್ನು ಪರಿಶೀಲಿಸಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕಲಂ 10(xxi) ರಂತೆ ಮತ್ತು ನಿಯಮ 7(1)ರಂತೆ ಕನಿಷ್ಠ ಶೇ.25 ರಷ್ಟು ಮೀಸಲು ನಿಧಿಯನ್ನು ಪ್ರತ್ಯೇಕವಾಗಿ ಹೂಡಿಕೆ ಮಾಡಿರುವ ಕುರಿತು ಮತ್ತು ದೈನಂದಿನ ವ್ಯವಹಾರದಲ್ಲಿ ಬಳಸದೇ ಇರುವ ಕುರಿತು ಖಾತರಿಪಡಿಸಿಕೊಳ್ಳತಕ್ಕದ್ದು. ಸದರಿ ಮೀಸಲು ನಿಧಿಯನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಥವಾ ಅಪೆಕ್ಸ್ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಲು ಆದ್ಯತೆ ನೀಡುವಂತೆ ಕ್ರಮವಹಿಸುವುದು.

2. ಸಹಕಾರಿಯ ತಕ್ಷಣದ ಬಳಕೆಗೆ ಅಗತ್ಯವಾಗಿರದಂಥ ನಿಧಿಗಳನ್ನು ಕಲಂ 18 ರಂತೆ ಹೂಡಿಕೆ ಮಾಡಿರುವ ಕುರಿತು ಖಾತರಿಪಡಿಸಿಕೊಳ್ಳತಕ್ಕದ್ದು. ಅಂಥ ನಿಧಿಗಳನ್ನು ಇತರೆ ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿ ಹೂಡಿಕೆ ಮಾಡದೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು/ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಲು ಆದ್ಯತೆ ನೀಡುವಂತೆ ಕ್ರಮವಹಿಸುವುದು.

3. ಕಲಂ 22 ರಂತೆ ಸಹಕಾರಿಯು ನಾಮಮಾತ್ರ ಸದಸ್ಯರು ಮತ್ತು ಸದಸ್ಯೇತರರಿಂದ ಠೇವಣಿಯನ್ನು ಸಂಗ್ರಹಿಸದೆ ಇರುವ ಕುರಿತು, ಕಲಂ 21(ಬಿ) ರಂತೆ ಸಹ-ಸದಸ್ಯರ ಸಂಖ್ಯೆಯು ಒಟ್ಟು ಸದಸ್ಯರ ಶೇ.15ನ್ನು ಮೀರದೇ ಇರುವ ಕುರಿತು ಖಾತರಿಪಡಿಸಿಕೊಳ್ಳತಕ್ಕದ್ದು.

4. ಕಲಂ 18 ರಂತೆ ಒಂದು ಸಹಕಾರಿಯು ಇನ್ನೊಂದು ಸಹಕಾರಿಯಲ್ಲಿ/ ಯಾವುದೇ ಉದ್ಯಮದಲ್ಲಿ ಹೂಡಿಕೆ/ ಠೇವಣಿ ಮಾಡಲು ಅವಕಾಶ ಇರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಹೂಡಿಕೆ ಮಾಡಿದ್ದಲ್ಲಿ ಪರಿಶೀಲಿಸುವುದು ಮತ್ತು ಕಲಂ 18 ರಂತೆ ಹೂಡಿಕೆ ಮಾಡುವ ಕುರಿತು ಕ್ರಮ ವಹಿಸುವಂತೆ ಸೂಚಿಸತಕ್ಕದ್ದು.

5. ಕಲಂ 33(10) ರಂತೆ ಲೆಕ್ಕಪರಿಶೋಧನಾ ವರದಿ ಮತ್ತು ಅನುಪಾಲನಾ ವರದಿ ಸಲ್ಲಿಸಿರುವ ಕುರಿತು, ಸುಸ್ತಿ ಸಾಲದ ಪ್ರಮಾಣ ಮತ್ತು ವಸೂಲಾತಿಗೆ ತೆಗೆದುಕೊಂಡ ಕ್ರಮದ ಕುರಿತು ಪರಿಶೀಲಿಸತಕ್ಕದ್ದು.

-1

6. ಕಲಂ 34 ರಂತೆ ಸಹಕಾರ ವರ್ಷ (ಆರ್ಥಿಕ ವರ್ಷ) ಮುಗಿದ ಆರು ತಿಂಗಳೊಳಗೆ ವರದಿಗಳನ್ನು ಸಲ್ಲಿಸಿರುವ ಕುರಿತು ಖಾತರಿಪಡಿಸಿಕೊಳ್ಳತಕ್ಕದ್ದು.
7. ಯಾವುದೇ ಸಹಕಾರಿಯು ತನ್ನ ಕಾರ್ಯವ್ಯಾಪ್ತಿ ವಿಸ್ತರಣೆ ಕೋರಿ ಸಲ್ಲಿಸುವ ಉಪವಿಧಿ ತಿದ್ದುಪಡಿ ಸಂದರ್ಭದಲ್ಲಿ ಈ ಕಛೇರಿಯಿಂದ ಕಾಲ ಕಾಲಕ್ಕೆ ನೀಡಿದ ಸುತ್ತೋಲೆಗಳಲ್ಲಿ ನಿಗಧಿಪಡಿಸಿದ ಸದಸ್ಯರು(ಷೇರುದಾರರು) ಹಾಗೂ ಸಂದಾಯಿತ ಷೇರು ಬಂಡವಾಳವನ್ನು ಹೊಂದಿರುವ ಕುರಿತು (ಅಯಾ ಭೌಗೋಳಿಕ ವ್ಯಾಪ್ತಿಯ ಜನಸಂಖ್ಯೆಯನ್ನಾಧರಿಸಿ) ಖಾತರಿಪಡಿಸಿಕೊಳ್ಳತಕ್ಕದ್ದು.
8. ಈ ಕಛೇರಿಯಿಂದ ಕಾಲಕಾಲಕ್ಕೆ ನೀಡಿದ ನಿರ್ದೇಶನ/ ಮಾರ್ಗಸೂಚಿಗಳನ್ನೂ ಸಹ ಪಾಲಿಸತಕ್ಕದ್ದು.

(ಟಿ.ಹೆಚ್.ಎಂ.ಕುಮಾರ್. ಭಾ.ಆ.ಸೇ)
ಸಹಕಾರಿಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

## ಉಡುಪಿ ಜಿಲ್ಲಾ ಸಂಪರ್ಕ ಕಛೇರಿ ವಿಳಾಸ ಬದಲಾಣೆ

ಉಡುಪಿ ಜಿಲ್ಲಾ ಸಂಪರ್ಕ ಕಛೇರಿಯನ್ನು ಈ ಕೆಳಗಿನ ವಿಳಾಸಕ್ಕೆ ಸ್ಥಳಾಂತರಿಸಲಾಗಿದೆ.

ನೂತನ ವಿಳಾಸ : ಅನಂತ ಟವರ್ಸ್, 3ನೇ ಮಹಡಿ, ಉಡುಪಿ ಜಿಲ್ಲಾ ನ್ಯಾಯಾಲಯದ ಎದುರು. ಉಡುಪಿ–576101

## ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳು ಹಾಗೂ ಸೌಹಾರ್ದ ಸಹಕಾರಿ ಬ್ಯಾಂಕುಗಳು ಸಾಧಿಸಿದ ಪ್ರಗತಿ 2024-25ನೇ (ಮಾರ್ಚ್ 2025ಕ್ಕೆ ಇದ್ದಂತೆ) ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು

ಶ್ರೀ ಉದಯರವಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತಿಪಟೂರು.

| ಆರ್ಥಿಕ ಅಂಶಗಳು | 31.03.2025ಕ್ಕೆ ಇದ್ದಂತೆ |
|---|---|
| ಒಟ್ಟು ಸದಸ್ಯರು | 6122 |
| ಒಟ್ಟು ಶೇರು ಬಂಡವಾಳ | 5,60,20,000 |
| ಒಟ್ಟು ಠೇವಣಿಗಳು | 346,75,36,871.22 |
| ಒಟ್ಟು ನಿಧಿಗಳು | 17,37,10,611.99 |
| ಒಟ್ಟು ಸಾಲಗಳು | 276,21,13,498 |
| ಒಟ್ಟು ಹೂಡಿಕೆಗಳು | 94,30,28,570 |
| ನಿವ್ವಳ ಲಾಭ | 4,43,24,848.44 |
| ಚರ ಮತ್ತು ಸ್ಥಿರಾಸ್ತಿ | 4,63,65,749.00 |

## ಭೇಟಿ

**ತುಮಕೂರು** : ದಿನಾಂಕ 15.05.2025ರಂದು ಸಂಯುಕ್ತ ಸಹಕಾರಿಯ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್‌ರವರು ತುಮಕೂರು ಜಿಲ್ಲಾ ಸಂಪರ್ಕ ಕಛೇರಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್‌ರವರು ಆಗಮಿಸಿದರು. ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು ಮಾನ್ಯ ನಿರ್ದೇಶಕರಿಗೆ ಹಾಗೂ ಪ್ರಾಂತೀಯ ಅಧಿಕಾರಿಗಳಿಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ರವರು ನೀಡಿದರು.

**ತುಮಕೂರು** : ದಿನಾಂಕ 06.05.2025ರಂದು ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, ತುಮಕೂರು ಇಲ್ಲಿ ತುಮಕೂರು ಜಿಲ್ಲೆಯ ಸಹಕಾರ ಇಲಾಖೆಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ತುಮಕೂರು ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಹೆಚ್.ಎಸ್. ಮೂರ್ತಿರವರು ವಹಿಸಿದ್ದರು. ಸಭೆಯಲ್ಲಿ ಲೆಕ್ಕಪರಿಶೋಧನಾ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ರಂಗಸ್ವಾಮಿರವರು, ಸಹಾಯಕ ನಿಬಂಧಕರಾದ ಶ್ರೀ ಓಬಲೇಶ್‌ರವರು, ತುಮಕೂರು ಜಿಲ್ಲೆಯ ಎಲ್ಲಾ ತಾಲೂಕಿನ ಸಹಕಾರ ಅಭಿವೃದ್ಧಿ ಅಧಿಕಾರಿಗಳು ಭಾಗವಹಿಸಿದ್ದರು. ಸದರಿ ಸಭೆಯಲ್ಲಿ ತುಮಕೂರು ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಗಳಾದ ಶ್ರೀ ಉಮೇಶ್ ಎ.ಎಸ್ ರವರು ಭಾಗವಹಿಸಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು.



## ಸಹಕಾರ ಚುನಾವಣಾ ಪ್ರಾಧಿಕಾರ ಆಯುಕ್ತರಾಗಿ ಡಾ. ಎನ್. ನಾಗಾಂಬಿಕಾ ದೇವಿ

**ಐ.ಎ.ಎಸ್ (ನಿ)**

**ಬೆಂಗಳೂರು :** ಸಹಕಾರ ಚುನಾವಣಾ ಪ್ರಾಧಿಕಾರ ಆಯುಕ್ತರಾಗಿ ಅಪರ ಮುಖ್ಯ ಕಾರ್ಯದರ್ಶಿಯವರಾದ (ನಿ) ಡಾ. ಎನ್ ನಾಗಾಂಬಿಕಾ ದೇವಿ, ಐ.ಎ.ಎಸ್(ನಿ) ಇವರನ್ನು ಸರ್ಕಾರ ನೇಮಕ ಮಾಡಿದೆ.

## ಆಡಳಿತ ಮಂಡಳಿ ಸಭೆ

**ತುಮಕೂರು :** ದಿನಾಂಕ 30.05.2025ರಂದು ವಲ್ಮೀಕ ಸೌಹಾರ್ದ ಸಹಕಾರ ಸಂಘ ನಿ, ತುಮಕೂರು ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಭಾಗವಹಿಸಿ ಆರ್ಥಿಕ ಸ್ಥಿತಿಯ ಕುರಿತು ಚರ್ಚಿಸಿದರು. ಠೇವಣಿದಾರರ ಹಣ ಮರುಪಾವತಿಗೆ ಸಂಬಂಧಿಸಿದಂತೆ ತಹಲ್‌ವರೆಗೂ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ಪಡೆದುಕೊಂಡರು ಹಾಗೂ ಸಹಕಾರಿಯ ವಿರುದ್ಧ ಸೌಹಾರ್ದ ನ್ಯಾಯಾಲಯದಲ್ಲಿ ದಾವೆ ದಾಖಲಾಗಿರುವ ಬಗ್ಗೆ ಚರ್ಚೆ ನಡೆಸಿ ಅಗತ್ಯ ನಿರ್ದೇಶನ ನೀಡಿದರು. ಸೌಹಾರ್ದ ನ್ಯಾಯಾಲಯದಿಂದ ನಿರ್ದೇಶಕರಿಗೆ ಜಾರಿ ಆಗಿರುವ ನೋಟೀಸ್‌ಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿ ಸಂಯುಕ್ತ ಸಹಕಾರಿಯ ಮುಂದಿನ ಕಾನೂನು ಕ್ರಮಗಳ ಕುರಿತು ವಿವರಿಸಿದರು.

## ಉದ್ಘಾಟನೆ



**ಮೊಳಕಾಲ್ಮುರು :** ಅಮೃತ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ಮೊಳಕಾಲ್ಮುರು ಇದರ ನೂತನ ಸ್ವಂತ ಕಟ್ಟಡದ ಉದ್ಘಾಟನೆಯು ದಿನಾಂಕ 09-04-2025 ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಜಿ. ನಂಜನಗೌಡ ರವರಿಂದ ನೆರವೇರಿಸಲಾಯಿತು. ಚಿತ್ರದುರ್ಗ ಶ್ರೀಸದ್ಗುರು ಕಬಿರಾನಂದ ಆಶ್ರಮದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಶಿವಲಿಂಗಾನಂದ ಮಹಾಸ್ವಾಮಿಯವರ ದಿವ್ಯ ಸಾನಿಧ್ಯದಲ್ಲಿ ಜರುಗಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿಕಟ ಪೂರ್ವ ಅಧ್ಯಕ್ಷರಾದ ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ. ನಿರ್ದೇಶಕರಾದ ಶ್ರೀರಘುರಾಮರೆಡ್ಡಿ, ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಸಿ.ವೀರಭದ್ರಬಾಬು ಸಿಂಧು ಸೌಹಾರ್ದ ಸಹಕಾರಿ ಸಂಘ ನಿ., ಸಿಂಧನೂರು ಇದರ ಅಧ್ಯಕ್ಷರಾದ ಶ್ರೀ ಬಿ. ರಜಶೇಖರರವರು ಮುಖ್ಯಅತಿಥಿಗಳಾಗಿ ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಡಿ.ಎಂ.ಈಶ್ವರಪ್ಪನವರು ವಹಿಸಿದ್ದರು.



**ಕುಂದಾಪುರ :** ಮಿತ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕುಂದಾಪುರ ತಾಲೂಕು ಬಸ್ರೂರಿನ ಮಾರ್ಗೋಳಿಯ ಶ್ರೀ ಬ್ರಹ್ಮಲಿಂಗೇಶ್ವರ ಕಾಂಪ್ಲೆಕ್ಸ್, ನೆಲಮಹಡಿಯಲ್ಲಿ ದಿನಾಂಕ 02-05-2025 ಶುಕ್ರವಾರದಂದು ಪೂರ್ವಾಹ್ನ 10.00 ಘಂಟೆಗೆ ಉಡುಪಿ ಜಿಲ್ಲಾ ಸೌಹಾರ್ದ ಒಕ್ಕೂಟ ನಿ., ಇದರ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು., ಇದರ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್ ಕೆ., ಖ್ಯಾತ ಗುತ್ತಿಗೆದಾರರಾದ ಶ್ರೀ ಎಚ್ ಶಶಿಧರ ನಾಯ್ಕ್, ಖ್ಯಾತ ಕನ್ನಡ ಸಂಗೀತ ನಿರ್ದೇಶಕ ಶ್ರೀ ರವಿ ಬಸ್ರೂರು, ಹಾಗೂ ಕಟ್ಟಡದ ಮಾಲೀಕರಾಗಿರುವ ಶ್ರೀ ನಾಗರಾಜ ಶೆಟ್ಟಿ ಇವರುಗಳು ದೀಪ ಹಚ್ಚಿ ಉದ್ಘಾಟಿಸಿರು.

ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ರಾಧಾಕೃಷ್ಣ ಯು ಮತ್ತು ಎಲ್ಲಾ ನಿರ್ದೇಶಕರು, ಹಾಗೂ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ (ನಿ.)ದ ಕಾರ್ಯದರ್ಶಿ ಲೋಹಿತ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ವಿಜಯ್ ಬಿ ಎಸ್ ಮತ್ತು ಸಹಕಾರಿಯ ಸದಸ್ಯರು ಹಾಗೂ ಆಮಂತ್ರಿತ ಅತಿಥಿಗಳು ಮತ್ತು ಸಿಬ್ಬಂದಿಗಳು ಹಾಜರಿದ್ದರು.

# ರಾಜ್ಯಮಟ್ಟದ ಸಹಕಾರ ಮಹಾಮಂಡಳಗಳು ತನ್ನ ಸದಸ್ಯ ಸಹಕಾರಗಳಿಗೆ, ಆಡಳಿತ ಮಂಡಳಿ ರಚನೆಯಲ್ಲಿ ಏನು ಸಂದೇಶ ನೀಡುತ್ತದೆ?



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

ಸಹಕಾರ ಸಂಸ್ಥೆಗಳು ರಚನೆಯಾಗುವುದು ಸಮಾನ ಮನಸ್ಕರು ತಮ್ಮ ಆರ್ಥಿಕ ಬೆಳವಣಿಗೆಗಾಗಿ ತಮ್ಮ ಅತ್ಯಲ್ಪ ಸಂಪನ್ಮೂಲವನ್ನು ಸಂಗ್ರಹಿಸಿ, ತಮ್ಮದೇ ಆರ್ಥಿಕ ಬೆಳವಣಿಗೆಗಾಗಿ ರಚಿಸಿಕೊಂಡ ಸಂಸ್ಥೆ. ಇದರ ಮೂಲ ಆರ್ಥಿಕ ಬೆಳವಣಿಗೆ ಆದರೂ ಸಮಾಜದ ಆರ್ಥಿಕ ಭದ್ರತೆ ಪ್ರಮುಖ ಉದ್ದೇಶ. ಇದಕ್ಕೆ ಪೂರಕವಾಗಿ, ಈ ಸಹಕಾರ ಸಂಸ್ಥೆಗಳನ್ನು ಮುನ್ನಡೆಸಲು ಸೇವಾ ಮನೋಭಾವವುಳ್ಳ ವ್ಯಕ್ತಿಗಳು ಮಂಡಳಿ ಸದಸ್ಯರನ್ನಾಗಿ ಆಯ್ಕೆ ಮಾಡಿ, ತಮ್ಮ ಆರ್ಥಿಕ ಬೆಳವಣಿಗೆ ಪ್ರಯತ್ನ ಮಾಡುತ್ತಾರೆ. ಅಂದರೆ ಸಹಕಾರ ಸಂಸ್ಥೆಗಳು ರಚನೆ ಮಾಡುವ ಆಡಳಿತ ಮಂಡಳಿಗಳು ಸೇವೆ ಮಾಡಲು ಆಸಕ್ತಿ ಇರುವ ವ್ಯಕ್ತಿಗಳು ಮಂಡಳಿ ಸದಸ್ಯರನ್ನಾಗಿ ಆಯ್ಕೆ ಮಾಡಬೇಕು. ಸಹಕಾರ ಸಂಸ್ಥೆಯಲ್ಲಿ ಆಯ್ಕೆಯಾದ ಮಂಡಳಿ ಸದಸ್ಯರನ್ನು ವೃತ್ತಿಪರರು ಎಂದು ಅರ್ಥೈಸಲಾಗದು. ಆದರೆ ಎಲ್ಲಾ ರಾಜ್ಯಮಟ್ಟದ ಸಹಕಾರ ಮಹಾಮಂಡಳಗಳು, ಮಂಡಳಿ ಸೇವೆ, ವ್ಯಕ್ತಿ ಎಂದು ಭಾವಿಸುತ್ತಾರೆ ಮತ್ತು ಒಮ್ಮೆ ಆ ಮಹಾಮಂಡಳದ ಸದಸ್ಯನಾದ ನಂತರ, ಶತಾಯುಗತಾಯು ಆ ಸಂಸ್ಥೆಯಲ್ಲಿ ಅವನು ಸ್ಥಾಪನೆಯಾಗುತ್ತಾನೆ ಮತ್ತೆ ಮಂಡಳಿ ಸದಸ್ಯತ್ವ ಒಂದು ವ್ಯಕ್ತಿ ಎಂದು ಪರಿಗಣಿಸಿ, ಪೂರ್ಣ ಪ್ರಮಾಣದ ವೇಳೆಯನ್ನು, ಆ ಸಂಸ್ಥೆಯಲ್ಲಿಯೇ ಕಳೆಯುತ್ತಾರೆ. ಮಂಡಳಿ ರಚನೆಯಾಗುವುದು ಕಾರ್ಯಾಂಗವನ್ನು ಆಯ್ಕೆ ಮಾಡಿ, ಮಂಡಳಿ ರೂಪಿಸುವ ಕಾರ್ಯ ಕ್ರಮಗಳನ್ನು ಜಾರಿ ಮಾಡುವಂತೆ ಕ್ರಮವಹಿಸಬೇಕು. ಆದರೆ ಎಲ್ಲ ಮಹಾಮಂಡಳಗಳಿಗೆ ಆಯ್ಕೆಯಾದ ಬಹಳಷ್ಟು ಸದಸ್ಯರು, ಅದರ ಮಾಲೀಕರಂತೆ ವರ್ತಿಸುವುದು, ಜಾರಿಯಲ್ಲಿದೆ. ಈ ಮಹಾಮಂಡಲಗಳು ಸದಸ್ಯ ಸಹಕಾರಿಗಳಿಗೆ ಮಾದರಿಯಾಗಿ ಕಾರ್ಯನಿರ್ವಹಿಸಿ, ಸದಸ್ಯರಿಗೆ ಅಳವಡಿಸಿಕೊಳ್ಳುವ ವ್ಯವಸ್ಥೆ ಇರಬೇಕು. ಆದರೆ ಆ ಮಹಾಮಂಡಳಗಳು ಮಾರ್ಗದರ್ಶನಕ್ಕೆ ಬದಲಾಗಿ, ಕಾಯದೆ, ನಿಯಮಗಳನ್ನು ಯಾವ ರೀತಿ ವ್ಯವಸ್ಥಿತವಾಗಿ ಉಲ್ಲಂಘಿಸುವುದು ಎಂದು ಸದಸ್ಯ ಸಹಕಾರಿಗಳಿಗೆ ಮಾದರಿಯಾಗುತ್ತದೆ. ಅಂದರೆ ಆ ಮಹಾಮಂಡಳಗಳು ಯಾವ ರೀತಿ ಸಂದೇಶ ನೀಡುತ್ತದೆ ಎಂದರೆ ಮಹಾಮಂಡಳಗಳು ಅನುಸರಿಸುವ ನೀತಿಯನ್ನು, ಸದಸ್ಯ ಸಹಕಾರಿಗಳು ಪಾಲಿಸಲು ಪ್ರೇರೇಪಿಸುತ್ತದೆ.

97ನೇ ಸಂವಿಧಾನವನ್ನು ತಿದ್ದುಪಡಿ 2011ರಲ್ಲಿ ರೂಪಿತವಾಗಿ 2012ರಲ್ಲಿ ಜಾರಿಗೆ ಬಂದ ನಂತರ, ಕರ್ನಾಟಕ ರಾಜ್ಯ, ತನ್ನ ಎರಡು ಸಹಕಾರಿ ಕಾಯಿದೆಗಳು ಎಂದರೆ ಕರ್ನಾಟಕ ಸಹಕಾರ ಸಮಸ್ಯೆಗಳ ಕಾಯ್ದೆ 1959 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಅನ್ನು, 2013ರಲ್ಲಿ ಸಂವಿಧಾನ ತಿದ್ದುಪಡಿ ಪೂರಕವಾಗಿ ಎರಡು ಕಾಯಿದೆಗಳಿಗೆ ತಿದ್ದುಪಡಿ ತಂದಿದೆ. 97ನೇ ಸಂವಿಧಾನ ತಿದ್ದುಪಡಿಯನ್ನು ಶ್ರೇಷ್ಠ ನ್ಯಾಯಾಲಯ ರಾಜ್ಯಗಳಿಗೆ ಸಂಬಂಧಪಟ್ಟಂತೆ ಅಸಿಂದು ಎಂದು ತೀರ್ಪಿತ್ತಿದು, ಅದನ್ನು ಕರ್ನಾಟಕ ರಾಜ್ಯ ಅಳವಡಿಸಿಕೊಂಡು ಕಾಯ್ದೆ ತಿದ್ದುಪಡಿ ಮಾಡಿದೆ. ಅಂದರೆ ರಾಜ್ಯ ಸರ್ಕಾರ ಸಹಕಾರ ಎಂಬ ವಿಷಯ ರಾಜ್ಯ ಪಟ್ಟಿಯಲ್ಲಿ ಬರುವುದರಿಂದ ರಾಜ್ಯ ಸರ್ಕಾರ ಮಾತ್ರ ಕಾಯಿದೆ ಮಾಡುವ ಅಧಿಕಾರ ಹೊಂದಿದೆ, ಅದರಂತೆ 2013, 2014, 2016ರಲ್ಲಿ ಪೂರಕ ತಿದ್ದುಪಡಿಗಳನ್ನು ತಂದಿದೆ.

ಆಡಳಿತ ಮಂಡಳಿ ರಚನೆಗೆ ಸಂಬಂಧಪಟ್ಟಂತೆ ಕನಿಷ್ಠ 13 ಮತ್ತು ಗರಿಷ್ಠ 21 ಮಂಡಳಿ ಸಂಖ್ಯೆ ಎಂದು ರಾಜ್ಯ ಕಾಯಿದೆ ರೂಪಿಸಿದೆ. ಇದರ ಜೊತೆಗೆ ಎರಡು ವಿಶೇಷ ಅವಕಾಶವೆಂದರೆ ಇಬ್ಬರಿಗೆ ಹೆಚ್ಚಿಲ್ಲದಂತೆ ವೃತ್ತಿಪರ ನಿರ್ದೇಶಕರೆಂದು ಸಹಮತದಿಂದ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಿದೆ. ಈ ವೃತ್ತಿಪರ ನಿರ್ದೇಶಕರು ಯಾರಿರಬೇಕೆಂದು ಸ್ಪಷ್ಟವಾಗಿ ನಿಗದಿಪಡಿಸಿದೆ.

ಅಂದರೆ, ಆಡಳಿತದಲ್ಲಿ ಎಂಬಿಎ, ಸನ್ನದು ಲೆಕ್ಕಗರು, ವಕೀಲರು ಮತ್ತು ಸಹಕಾರಿಗಳು ನಿರ್ವಹಿಸುವ ಕಾರ್ಯದಲ್ಲಿ ಪರಿಣಿತಿ ಹೊಂದಿರುವ ವ್ಯಕ್ತಿಗಳು ಸಹಮತದಿಂದ ಸೇರಿಸಿಕೊಳ್ಳುವುದು. ಇದರ ಜೊತೆಗೆ ಮೂವರಿಗೆ ಮೀರದಂತೆ ಕಾರ್ಯನಿರತ ನಿರ್ದೇಶಕರೆಂದು ಸಹಮತದಿಂದ ಆಯ್ಕೆ ಮಾಡಿಕೊಳ್ಳಲು ಅವಕಾಶ. ಇದನ್ನು ಕೆಲವು ಪಟ್ಟಣ ಬ್ಯಾಂಕುಗಳು ಆರ್‌ಬಿಐ ವಾಣಿಜ ಬ್ಯಾಂಕುಗಳಿಗೆ ರೂಪಿಸಿದ ಸ್ವತಂತ್ರ ನಿರ್ದೇಶಕರು/ ಕಾಯಂ ನಿರ್ದೇಶಕರು ಎಂಬ ವರ್ಗಿಕರಣಕ್ಕೆ ಸಮಾನಾಂತರವಾಗಿ ತಮ್ಮ ಬ್ಯಾಂಕ್ ಗಳಿಗೆ ಆಯ್ಕೆ ಮಾಡಿಕೊಂಡು, ಕಾರ್ಯಾಂಗದ ಜವಾಬ್ದಾರಿ ನೀಡಿದೆ ಎಂದರೆ, ಇದನ್ನು ಮಾದರಿಯಾಗಿ ಪರಿಗಣಿಸಿ, ಪ್ರತಿಯೊಂದು ಪ್ರಾಥಮಿಕ ಸಹಕಾರ ಸಂಸ್ಥೆಗಳು ಹೆಚ್ಚುವರಿಯಾಗಿ ಮೂವರು ನಿರ್ದೇಶಕರನ್ನು ಸಹಮತದಿಂದ ಸೇರಿಸಿಕೊಂಡು ಹಿಂಬಾಗಿಲಿನಿಂದ ಮೂವರು ವ್ಯಕ್ತಿಗಳಿಗೆ ನಿರ್ದೇಶಕತನ ನೀಡುವ ಪ್ರಯತ್ನ ತಪ್ಪು ಸಂದೇಶ ನೀಡುತ್ತದೆ.

ಇದನ್ನು ಸಹಕಾರ ಸಂಸ್ಥೆಗಳು ನಿಬಂಧಕರು ಅಥವಾ ಸರ್ಕಾರ ವಿಷದೀಕರಣ ನೀಡದಿದ್ದರೆ, ಆಡಳಿತ ಮಂಡಳಿ ಸಂಖ್ಯೆ 21ಕ್ಕೆ ಮೀರಿರುತ್ತದೆ. ಇದಕ್ಕೆ ಒಂದು ಸ್ಪಷ್ಟ ಉದಾಹರಣೆ ಕೊಡುವುದಾದರೆ ಒಂದು ರಾಜ್ಯ

ಮಟ್ಟದ ಸಹಕಾರ ಮಹಾಮಂಡಳ, ಆಡಳಿತ ಮಂಡಳಿ ರಚನೆ ಮಾಡುವಾಗ ಕಾಯ್ದೆಯಂತೆ 21ನ್ನು ಆಯ್ಕೆಯಾದ ನಿರ್ದೇಶಕರೆಂದು, ಇದರ ಜೊತೆಗೆ ಮೂರರಿಂದ ನಾಲ್ಕು ವ್ಯಕ್ತಿಗಳು ವಿಶೇಷ ಆಹ್ವಾನಿತರೆಂದು ಹಾಗೂ ಇಬ್ಬರ ವ್ಯಕ್ತಿಪರ ನಿರ್ದೇಶಕರೆಂದು, ಮತ್ತು ಇದರ ಜೊತೆಗೆ ಶಿಕ್ಷಣ ನಿಧಿ ನಿರ್ವಹಣೆಗೆ ರಚನೆಯಾದ ಸಮಿತಿಯಲ್ಲಿ 7+1 ವ್ಯಕ್ತಿಗಳನ್ನು ಶಿಕ್ಷಣ ಸಲಹಾ ಸಮಿತಿ ಎಂದು ರಚಿಸಿ (ಇದರ ವಿಪರ್ಯಾಸ ವೆಂದರೆ ಈ ಮಹಾಮಂಡಳದ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ ಸದಸ್ಯರೇ ಅಲ್ಲ) ಇದರ ಜೊತೆಗೆ ಯಾವುದೇ ಸಮಿತಿಯಲ್ಲಿ ಮುಖ್ಯ ಕಾರ್ಯನಿರ್ವಾಹಕನಿಲ್ಲದೆ ಸಭೆಗಳು ನಡೆಯತಕ್ಕದ್ದಲ್ಲ. ಅಂದರೆ ಆ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ, ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲೇಬೇಕು. ಏಕೆಂದರೆ ನಡವಳಿಕೆಗಳನ್ನು ಅವನೇ ಯಥಾವತ್ತಾಗಿ, ನೈಜವಾಗಿ ದಾಖಲಿಸಬೇಕೆಂದು ನಿಯಮದ ಶರತ್ತು ವಿಧಿಸಲಾಗಿದೆ. ಅಂದರೆ ಈ ಮಹಾಮಂಡಳ ಚುನಾಯಿತ ಮಂಡಳಿ ಸದಸ್ಯರು

| | |
|---|---|
| ಮಂಡಳಿ | 21 |
| ವಿಶೇಷ ಆಹ್ವಾನಿತರು | 3 |
| ವ್ಯಕ್ತಿಪರ ನಿರ್ದೇಶಕ | 2 |
| ಶಿಕ್ಷಣ ಸಮಿತಿ ಸದಸ್ಯರು | 7 |
| | ---------- |
| | ಒಟ್ಟು 33 |
| | ---------- |

ಈ ಮಹಾಮಂಡಳಿ ಸದಸ್ಯ ಸಹಕಾರಿಗಳಿಗೆ ಏನು ಸಂದೇಶ ನೀಡುತ್ತದೆ ಎಂದು ಗಮನಿಸಿದರೆ, ಕಾಯ್ದೆಯಲ್ಲಿ ಯಾವ ರೀತಿ ಉಲ್ಲಂಘಿಸುವುದು ಎಂಬುದನ್ನು ಮಾದರಿಯಾಗಿ ತಿಳಿ ಹೇಳುತ್ತದೆ. ಇದಕ್ಕೆ ಪರಿಹಾಸ್ಯವಾಗಿ ಈ ಕಾಯಿದೆ ಜಾರಿ ಮಾಡುವ ಸಹಕಾರ ಸಂಘಗಳ ನಿಬಂಧಕರೆ ಒಬ್ಬ ನಿರ್ದೇಶಕ ಎಂದರೆ ಆಶ್ಚರ್ಯವಾಗುತ್ತದೆ. ಇಂತಹ ಪ್ರಸಂಗದಲ್ಲಿ ನಿಬಂಧಕರು ಏಕೆ ಮಧ್ಯಪ್ರವೇಶ ಮಾಡುತ್ತಿಲ್ಲ?

ಇದೇ ನೀತಿಯನ್ನು ಇನ್ನಿತರ ಮಹಾಮಂಡಳಗಳು ಅನುಸರಿಸುತ್ತದೆ. ಶಿಕ್ಷಣಕ್ಕೆ ಮೀಸಲಾದ ಒಂದು ಮಹಾಮಂಡಳದ ಮಂಡಳಿ ಸದಸ್ಯತ್ವ ನೀಡಲಾಗದ ಇಬ್ಬರು ವ್ಯಕ್ತಿಗಳನ್ನು ವ್ಯಕ್ತಿಪರ ನಿರ್ದೇಶಕರೆಂದು ಸಹಮತದಿಂದ ಸೇರಿಸಿಕೊಳ್ಳಲಾಗಿದೆ. ಅಂದರೆ ಅವನು ನಿರ್ದೇಶಕರಿಗೆ ಸಲ್ಲುವ ಎಲ್ಲಾ ಸೌಲಭ್ಯಗಳನ್ನು ಪಡೆಯುತ್ತಾರೆ. ಆದರೆ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊರತು ಪಡಿಸಿ, ಈ ಮಹಾಮಂಡಳದಲ್ಲಿಯೂ, ನಿಬಂಧಕರು, ನಿರ್ದೇಶಕರಾಗಿ ಇದ್ದಾರೆ.

ಮಗದೊಂದು ರಾಜ್ಯ ಮಹಾಮಂಡಳದಲ್ಲಿ, ಸದಸ್ಯ ಒಕ್ಕೂಟದ ಮೂರು ರಾಜ್ಯ ಸಂಸ್ಥೆ ರಚನೆ ಮಾಡುವಾಗ ಕಲಂ 120 ರಲ್ಲಿ ನೋಂದಾವಣೆಯಿಂದ ವಿನಾಯಿತಿ ಪಡೆದು ಒಕ್ಕೂಟದಿಂದ ಅಧ್ಯಕ್ಷರು ಮತ್ತು ಮೂವರು ನಿರ್ದೇಶಕರು ಪ್ರತಿ ಒಕ್ಕೂಟದಿಂದ ಮಹಾಮಂಡಳದ ಸದಸ್ಯರಾಗುತ್ತಿದ್ದಾರೆ. ಇದಕ್ಕೆ ಕಲಂ 121 ರಲ್ಲಿ ವಿನಾಯಿತಿ ಇಲ್ಲ ಇದು ಕಲಂ 20 ರಲ್ಲಿ ನಿಗದಿ ಪಡಿಸಿದ ಒಬ್ಬ ಸದಸ್ಯನಿಂದ ಒಂದು ವ್ಯಕ್ತಿ ಎಂಬ ನೀತಿಗೆ ವಿರುದ್ಧವಾಗಿ, ಒಂದು ಸದಸ್ಯನಿಗೆ ನಾಲ್ಕು ಪ್ರತಿನಿಧಿ ಎಂದು ಕಾರ್ಯರೂಪಕ್ಕೆ ತಂದಿದೆ. ಇದರಲ್ಲಿಯೂ ನಿಬಂಧಕರು ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ನಿಬಂಧಕರು ಕಾಯಿದೆ ಜಾರಿ ತರುವ ಬದಲಾಗಿ ಕಾಯಿದೆ ಮುರಿಯುವ ಮಹಾಮಂಡಳಗಳ ಸದಸ್ಯರಾಗಿ ಸಹಕರಿಸುತ್ತಿದ್ದಾರೆ ಅಂದರೆ ಕಾಯ್ದೆ ಜಾರಿ ಮಾಡುವ ಬದಲು ಅದನ್ನು ಮುರಿಯುವವರ ಜೊತೆ ಸಹಕರಿಸುತ್ತಿದ್ದಾರೆ. ಇದೇ ರೀತಿ ಉದಾರಿ ಕೃತ ಕಾಯಿದೆ ಅಂದರೆ ಕರ್ನಾಟಕ ಸೌಹಾರ್ದ ಕಾಯಿದೆ 1997 ರಲ್ಲಿ ರಚನೆಯಾದ ಸಮಿತಿಯಲ್ಲಿ ವಿಷಯ ತಜ್ಞರೆಂದು ಸಹಕಾರ ಸಂಸ್ಥೆ ನಡೆಸುತ್ತಿರುವ ವ್ಯಕ್ತಿ ತಜ್ಞ ಸದಸ್ಯರೆಂದು ಸೇರಿಸಿ ಕೊಳ್ಳಲಾಗಿದೆ ಮೇಲೆ ಹೇಳಿದಂತೆ ಸಹಕಾರ ಸಂಸ್ಥೆ, ಆರ್ಥಿಕ ಬೆಳವಣಿಗೆಗಾಗಿ ರಚಿಸಿ ರಚಿಸಿಕೊಂಡ ಒಂದು ಸೇವಾ ಸಂಸ್ಥೆ, ಸಹಕಾರ ಸಂಸ್ಥೆ ನಡೆಸಿದವರು ವ್ಯತ್ತಿಪರರು ಅಲ್ಲ. ಅದರ ಮಾರ್ಗದರ್ಶನಕ್ಕೆ ಮಾತ್ರ ಎಂಬುದಲ್ಲಿ ತಿಳಿಯದೆ ಸದಸ್ಯ ಸಹಕಾರಿಗಳಿಗೆ ತಪ್ಪು ಸಂದೇಶ ನೀಡುತ್ತಿಲ್ಲವೇ? ನಿಬಂಧಕರೆ?



**ಚಿಕ್ಕಮಗಳೂರು :** ದಿನಾಂಕ 20-05-2025 ರಂದು ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲೂಕಿನ ಯಸ್ಕಾನ್ ವಾಣಿಜ್ಯ ಸಂಕೀರ್ಣದಲ್ಲಿ ಯಡಗೆರೆ ಸೌಹಾರ್ದ ಕೋ- ಆಪರೇಟೀವ್ ಸೊಸೈಟಿ ಲಿ., ಮತ್ತು ಗಾಯಿತ್ರಿ ವಿಪ್ರ ಮಹಿಳಾ ಬಳಗ, ಕುದುರೆಗುಂಡಿ ಇವರ ಸಹಯೋಗದೊಂದಿಗೆ, ಶಂಕರ ಕಣ್ಣಿನ ಆಸ್ಪತ್ರೆ ಶಿವಮೊಗ್ಗ ಇವರಿಂದ ಉಚಿತ ನೇತ್ರ ತಪಾಸಣಾ ಶಿಬಿರ ಮತ್ತು ರೋಟರಿ ಕ್ಲಬ್ ಶಿವಮೊಗ್ಗ, ಇವರಿಂದ ರಕ್ತದಾನ ಶಿಬಿರ ನಡೆಸಲಾಯಿತು. ಈ ಸಂದರ್ಭದಲ್ಲಿ ಸದಸ್ಯರು ಮತ್ತು ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡರು.

# TDS/TCS Changes applicable from 1st April 2025:

- CA. Madhukar G Hegde

The Finance Act, 2025, in order to simplify tax compliance, has made significant changes in TDS/TCS rules applicable effective from 1st April 2025. The said changes are aimed at eliminating unnecessary complexities in TDS/TCS provisions. The following are the few important changes that are applicable from 01.04.2025:

### 1. Rationalization of threshold limits:

The threshold limits u/s 193 (Interest on Securities), 194(Dividend), 194A (Interest other than Interest on Securities), 194B, 194BB, 194D (Insurance Commission), 194G, 194H (Commission or Brokerage), 194I (Rent), 194J (Fee for Professional or Technical Services), 194K, 194LA have been enhanced from the existing threshold limits to ease out the compliance burden. Few of the changes are, the threshold limit has been raised for TDS on interest other than interest on securities u/s 194A, from Rs.50,000/- to Rs.1,00,000/- for senior citizen and from Rs.40,000/- to Rs.50,000/- for general public, threshold limit for TDS u/s 194I has been considerably increased from Rs.2,40,000/- PA (per annum) to Rs.50,000/- PM(per month), limit for TDS u/s 194H (Commission) raised from Rs.15,000/- to Rs.20,000/-, limit for TDS u/s 194J (Professional-Fee) raised from Rs.30,000/- to Rs.50,000/-

.One should note that the provisions related TDS on Rent has been modified from Rs.2,40,000/- per annum earlier to Rs.50,000/- per month now. Hence, effective 1st April 2025, TDS required to be made if the payment of rent is Rs.50,000/- or more per month or part of the month in contrast with earlier provision which mandated if the payment exceeded per annum.

### 2. TDS on Partners Remuneration, Interest, Commission (Sec.194T):

The amount paid to partners in the form of remuneration, interest and commission was not subject to TDS up to 31.03.2025. Section 194T was inserted by the Finance Act, 2024, which requires Partnership Firms/LLPs to deduct tax source at the rate of 10% provided the payments of the above nature exceeds to Rs.20000/- in a Financial Year. The said provision is applicable from 01.04.2025.

### 3. Enhanced threshold limits for TCS:

The threshold limit for TCS for remittance under Liberalised Remittance Scheme (LRS) and foreign tour packages u/s 206C(1G) has been enhanced from Rs.7,00,000/- to Rs.10,00,000/-. Further TCS for remittance under LRS for education u/s 206C(1G) has been removed, if financed through educational loans.

### 4. Removal of TCS on Sale of Goods:

In order to remove overlapping of TCS u/s 206C(1H) (on sale of goods) and TDS u/s 194Q (on purchase of goods), the TCS u/s 206C(1H) has been removed for sale of goods aggregating Rs.50 lacs and above in a financial year.The said amendment will substantially reduce the compliance burden on the seller of the goods.

### 5. Omission of sections 206AB and 206CCA:

The deductors/collectors were required to deduct/collect taxes at higher as per section

206AB/206CCA for Specified Persons (non-filers of income tax returns). The same was creating lot of burden while identifying the Specified Persons and complying the provisions. In order to reduce the compliance burden, the said sections have been removed with effect from 01.04.2025 and the higher rate of taxes have been done away with.

**6. Exemption from Prosecution for delayed TCS payment:**

Under the current Section 276BB, failure to deposit Tax Collected at Source (TCS) as required under Section 206C can lead to imprisonment ranging from three months to seven years, along with a fine.To ease compliance and provide relief, an amendment to Section 276BB has been made. Under this change, prosecution will not be initiated if the TCS is deposited within the due date for filing the quarterly TCS statement, as per the proviso to Section 206C(3).This amendment, effective April 1, 2025, aims to reduce legal penalties for delayed TCS deposits, ensuring that businesses are not unduly penalised as long as the payment is made within the prescribed timeline.

**TDS CHART for FY 2025-26:**

| Section | Nature of payment | Threshold Limit (Rs) | Rates applicable |
|---|---|---|---|
| 193 | Interest on securities | 10000 | 10% |
| 194 | Dividend | 10000 | 10% |
| 194A | Interest other than interest on securities- Banks, co-op societies* and Post Office | 50000 100000* | 10% |
| 194A | Interest other than interest on securities- Others | 5000 | 10% |
| 194B | Winnings from lotteries, crossword puzzles (Single transaction) | 10000 | 30% |
| 194C | Payment to Contractors- Individual and HUF | 30000* 100000* | 1% |
| 194C | Payment to Contractors- Other than Individual and HUF | 30000* 100000* | 2% |
| 194D | Insurance Commission | 20000 | 2% |
| 194DA | Payment in respect of Life Insurance | 100000 | 2% |
| 194EE | Payment in respect of deposit under NSS | 2500 | 10% |
| 194G | Commission on sale of lottery tickets | 20000 | 2% |
| 194H | Commission and Brokerage | 20000 | 2% |
| 194I | Rent of Immovable Property | 50000 pm | 10% |
| 194I | Rent of Plant and Machinery | 50000 pm | 2% |
| 194IA | Payment for acquisition of immovable property | 5000000 | 1% |

| | | | |
|---|---|---|---|
| 194IB | Payment of rent by certain individual or HUF | Exceeding 50000 P.M | 2% |
| 194IC | Payment for joint development property | - | 10% |
| 194J | Royalty towards sale, distribution or exhibition of cinematographic films | 50000 | 2% |
| 194J | Professional payment for business of operation of call Centre | 50000 | 2% |
| 194J | Fees for technical services (other than professional services) | 50000 | 2% |
| 194J | Professional Charges | 50000 | 10% |
| 194M | Payment to contractor, commission agent, broker or professional by certain individuals or HUF | 5000000 | 2% |
| 194N | Previous 3 years ROI filed cases | Exceeding 10000000 | 2% |
| 194N | Previous 3 years ROI filed cases (Co-operative Socie-ties) | Exceeding 30000000 | 2% |
| 194N | Previous 3 years ROI not filed cases (From 1.07.2020) | 2000000 to 10000000 | 2% |
| 194N | Previous 3 years ROI not filed cases (From 1.07.2020) | Exceeding 10000000 | 5% |
| 194O | TDS on E-commerce Participants | - | 1% |
| 194P | Payment of pension or interest to specified senior citizens of age 75 years or more | Basic exemption limit | Normal tax slab rates |
| 194T | Remuneration, Interest, Commission to Partners | 20000 | 10% |

**Note:** Threshold limit of Rs.100000/- applicable for senior citizens u/s 194A

Co-operative societies having turnover of more than Rs.50 crore during the preceding Financial Year is liable to deduct tax at source from 01.04.2020.

Under section 194C TDS affected if single payment is Rs.30000 or

# ಆಂತರಿಕ ಶಿಸ್ತಿಗೆ ಆದ್ಯತೆ ನೀಡುವ ಮೂಲಕ ಸಹಕಾರಿ ಸಂಸ್ಥೆಗಳಲ್ಲಿ ಯಶಸ್ವಿ ಕಾರ್ಯನಿರ್ವಹಣೆ

– ಶ್ರೀಮತಿ ದಿವ್ಯ.ಟಿ., ಕಿರಿಯ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು.

ಸಹಕಾರಿ ಸಂಸ್ಥೆಗಳು ಪರಸ್ಪರ ನಂಬಿಕೆ, ಭಾಗವಹಿಸುವಿಕೆ ಮತ್ತು ಹಂಚಿಕೆಯ ಜವಾಬ್ದಾರಿಯ ಮೇಲೆ ಅಭಿವೃದ್ಧಿ ಹೊಂದುವ ಪ್ರಜಾಪ್ರಭುತ್ವ ಸಂಸ್ಥೆಗಳಾಗಿವೆ. ಅವುಗಳ ಯಶಸ್ಸು ಹೆಚ್ಚಾಗಿ ಸದಸ್ಯರು ಮತ್ತು ನಿರ್ವಹಣೆ ಎರಡನ್ನೂ ನಿರ್ವಹಿಸುವ ಆಂತರಿಕ ಶಿಸ್ತಿನ ಮೇಲೆ ಅವಲಂಬಿತವಾಗಿರುತ್ತದೆ. ಶಿಸ್ತಿನ ಬಲವಾದ ಚೌಕಟ್ಟಿನ ಮೂಲಕ ಸಮಾನತೆ, ಹೊಣೆಗಾರಿಕೆ ಮತ್ತು ಪಾರದರ್ಶಕತೆ ಸೇರಿದಂತೆ ಸಹಕಾರದ ತತ್ವಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ. ಆದ್ದರಿಂದ, ಆಂತರಿಕ ಶಿಸ್ತು ಕೇವಲ ನಿಯಂತ್ರಕವಾಗಿ ಮಾತ್ರ ಅಗತ್ಯವಲ್ಲ, ಆದರೆ ಸುಸ್ಥಿರ ಸಹಕಾರಿ ಆಡಳಿತಕ್ಕೆ ಅಡಿಪಾಯವಾಗಿದೆ.

ಸಹಕಾರಿ ಸಂಸ್ಥೆಗಳಲ್ಲಿ ಆಂತರಿಕ ಶಿಸ್ತು ನಂಬಿಕೆ, ಪಾರದರ್ಶಕತೆ, ದಕ್ಷತೆ ಮತ್ತು ಪ್ರಜಾಪ್ರಭುತ್ವ ಕಾರ್ಯನಿರ್ವಹಣೆಯನ್ನು ಕಾಪಾಡಿಕೊಳ್ಳಲು ಅತ್ಯಗತ್ಯ. ಸದಸ್ಯರು ಮತ್ತು ನಾಯಕರು ಸಹಕಾರಿಯ ಉಪವಿಧಿಗಳು, ಸಹಕಾರಿ ಕಾನೂನುಗಳು, ಸಹಕಾರಿ ತತ್ವಗಳು ಮತ್ತು ನಿಯಮಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳುವ ನಿಯಮಗಳು, ಅಭ್ಯಾಸಗಳು, ರೂಢಿಗಳು ಮತ್ತು ಕಾರ್ಯವಿಧಾನಗಳ ಗುಂಪನ್ನು ಇದು ಸೂಚಿಸುತ್ತದೆ.

ಸಹಕಾರಿ ಸಂಸ್ಥೆಗಳಲ್ಲಿ ಆಂತರಿಕ ಶಿಸ್ತು ಎಂದರೆ ಸಹಕಾರಿ ಸಂಸ್ಥೆಗಳ ರಚನೆಯೊಳಗೆ ಕ್ರಮ ಮತ್ತು ನಿಯಮಗಳ ಅನುಸರಣೆಯನ್ನು ಕಾಪಾಡಿಕೊಳ್ಳಲು ಬಳಸುವ ಪ್ರಕ್ರಿಯೆಗಳು ಮತ್ತು ಕಾರ್ಯವಿಧಾನಗಳನ್ನು ಒಳಗೊಂಡಿದೆ. ಸದಸ್ಯರು ಮತ್ತು ನೌಕರರು ಸ್ಥಾಪಿತ ಮಾರ್ಗಸೂಚಿಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳುವುದು, ದುಷ್ಕೃತ್ಯವನ್ನು ಪರಿಹರಿಸುವುದು ಮತ್ತು ನ್ಯಾಯಯುತ ಹಾಗೂ ನಿಷ್ಪಕ್ಷಪಾತ ರೀತಿಯಲ್ಲಿ ವಿವಾದಗಳನ್ನು ಪರಿಹರಿಸುವುದು ಇದರಲ್ಲಿ ಸೇರಿದೆ.

## ಸಹಕಾರಿ ಸಂಸ್ಥೆಗಳಲ್ಲಿ ಆಂತರಿಕ ಶಿಸ್ತಿನ ಪ್ರಮುಖ ಅಂಶಗಳು :

ಸಹಕಾರಿ ಸಂಸ್ಥೆಗಳಲ್ಲಿ ಆಂತರಿಕ ಶಿಸ್ತನ್ನು ಆಡಳಿತ, ಆರ್ಥಿಕ ಹೊಣೆಗಾರಿಕೆ ಮತ್ತು ನೈತಿಕ ನಡವಳಿಕೆಯ ಸಮಗ್ರ ಚೌಕಟ್ಟಿನ ಮೂಲಕ ಎತ್ತಿಹಿಡಿಯಲಾಗುತ್ತದೆ. ಸ್ಪಷ್ಟ ಉಪನಿಯಮಗಳು, ಪರಿಣಾಮಕಾರಿ ನಾಯಕತ್ವ, ಸದಸ್ಯರ ಭಾಗವಹಿಸುವಿಕೆ, ನಿಯಮಿತ ಲೆಕ್ಕಪರಿಶೋಧನೆಗಳು ಮತ್ತು ಸಹಕಾರಿ ತತ್ವಗಳ ಅನುಸರಣೆಯಂತಹ ಪ್ರಮುಖ ಅಂಶಗಳು ಪಾರದರ್ಶಕತೆ, ಕಾನೂನು ಅನುಸರಣೆ ಮತ್ತು ಸುಗಮ ಕಾರ್ಯನಿರ್ವಹಣೆಯನ್ನು ಖಚಿತಪಡಿಸುತ್ತವೆ. ಈ ಘಟಕಗಳು ಒಟ್ಟಾಗಿ, ಸಹಕಾರಿ ಸಂಸ್ಥೆಯೊಳಗೆ ನಂಬಿಕೆ, ಸಮಗ್ರತೆ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಬೆಳೆಸುತ್ತವೆ. ಸಹಕಾರಿ ಸಂಸ್ಥೆಗಳಲ್ಲಿ ಆಂತರಿಕ ಶಿಸ್ತಿನ ಪ್ರಮುಖ ಅಂಶಗಳು ಈ ಕೆಳಗಿನಂತಿದೆ;

- ಸಹಕಾರಿ ತತ್ವಗಳ ಅನುಸರಣೆ
- ಸ್ಪಷ್ಟ ಮತ್ತು ಜಾರಿಗೊಳಿಸಲಾದ ಉಪನಿಯಮಗಳು
- ಪಾರದರ್ಶಕ ಹಾಗೂ ಪ್ರಜಾಪ್ರಭುತ್ವ ಆಡಳಿತ
- ನಿಯಮಿತ ಸಭೆಗಳು ಮತ್ತು ವಿಮರ್ಶೆಗಳು
- ಹಣಕಾಸು ಹೊಣೆಗಾರಿಕೆ – ಸಕಾಲಿಕ ಆಂತರಿಕ ಮತ್ತು ಶಾಸನಬದ್ಧ ಲೆಕ್ಕಪರಿಶೋಧನೆಗಳು
- ಆರ್ಥಿಕ ಶಿಸ್ತು
- ಮಂಡಳಿ ಸದಸ್ಯರು, ನಿರ್ವಹಣೆ ಮತ್ತು ಉದ್ಯೋಗಿಗಳ ನಡುವೆ ಅಧಿಕಾರದ ಸ್ಪಷ್ಟ ನಿಯೋಜನೆ
- ಪರಿಣಾಮಕಾರಿ ನಾಯಕತ್ವ ಮತ್ತು ನಿರ್ವಹಣೆ
- ಸದಸ್ಯರ ಸಕ್ರಿಯ ಭಾಗವಹಿಸುವಿಕೆ ಮತ್ತು ತೊಡಗಿಸಿಕೊಳ್ಳುವಿಕೆ
- ಕಾನೂನು ಮತ್ತು ನಿಯಂತ್ರಕ ಚೌಕಟ್ಟಿನ ಅನುಸರಣೆ
- ಆಂತರಿಕ ನಿಯಂತ್ರಣ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ
- ನೀತಿ ಸಂಹಿತೆ, ನೈತಿಕ ನಡವಳಿಕೆ ಮತ್ತು ಸಮಗ್ರತೆ
- ಸದಸ್ಯರ ಶಿಕ್ಷಣ ಮತ್ತು ಜಾಗೃತಿ
- ಸಂಘರ್ಷ ಪರಿಹಾರ ಕಾರ್ಯವಿಧಾನಗಳು
- ದುಷ್ಕೃತ್ಯಕ್ಕೆ ದಂಡಗಳು

## ಸಹಕಾರಿ ಸಂಸ್ಥೆಗಳಲ್ಲಿ ಆಂತರಿಕ ಶಿಸ್ತಿನ ಕೊರತೆಯಿಂದ ಉಂಟಾಗುವ ಸಮಸ್ಯೆಗಳು :

ಸಹಕಾರಿ ಸಂಸ್ಥೆಗಳಲ್ಲಿ ಆಂತರಿಕ ಶಿಸ್ತಿನ ಕೊರತೆಯು ಅವುಗಳ ಪರಿಣಾಮಕಾರಿತ್ವ, ವಿಶ್ವಾಸಾರ್ಹತೆ ಮತ್ತು ಸುಸ್ಥಿರತೆಯನ್ನು ಕುಂಠಿತಗೊಳಿಸುವ ಹಲವಾರು ಸಮಸ್ಯೆಗಳಿಗೆ ಕಾರಣವಾಗಬಹುದು. ದುರುಪಯೋಗ ಮತ್ತು ಭ್ರಷ್ಟಾಚಾರ, ಸದಸ್ಯರ ನಂಬಿಕೆಯ ನಷ್ಟ, ಕಳಪೆ ಆಡಳಿತ, ಕಡಿಮೆಯಾದ ದಕ್ಷತೆ ಮತ್ತು ಉತ್ಪಾದಕತೆ, ಕಾನೂನು ಮತ್ತು ನಿಯಂತ್ರಕ ಸಮಸ್ಯೆಗಳು, ಆರ್ಥಿಕ ಅಸ್ಥಿರತೆ, ಸಾಮಾಜಿಕ ಉದ್ದೇಶದಲ್ಲಿ ಕುಸಿತದಂತಹ ಸಮಸ್ಯೆಗಳು ಉದ್ಭವಿಸುತ್ತದೆ. ಈ ಹಿನ್ನೆಲೆಯಲ್ಲಿ ಸಹಕಾರಿ ಸಂಸ್ಥೆಗಳಲ್ಲಿ ಪಾರದರ್ಶಕತೆ, ಸದಸ್ಯರ ನಂಬಿಕೆ, ಪರಿಣಾಮಕಾರಿ ಕಾರ್ಯನಿರ್ವಹಣೆ ಮತ್ತು ದೀರ್ಘಕಾಲೀನ ಕಾರ್ಯಸಾಧ್ಯತೆಯನ್ನು ಕಾಪಾಡಿಕೊಳ್ಳಲು ಆಂತರಿಕ ಶಿಸ್ತು ಅತ್ಯಗತ್ಯ. ಇದರ ಅನುಪಸ್ಥಿತಿಯು ಸಹಕಾರಿ ಸಂಸ್ಥೆಗಳನ್ನು ನಿಷ್ಕ್ರಿಯ ಅಥವಾ ಶೋಷಕ ಘಟಕಗಳಾಗಿ ಪರಿವರ್ತಿಸುತ್ತದೆ, ಅವುಗಳನ್ನು ರಚಿಸಲಾದ ಉದ್ದೇಶವನ್ನೇ ಸೋಲಿಸುತ್ತದೆ.

## ಸಹಕಾರಿ ಸಂಸ್ಥೆಗಳಲ್ಲಿ ಆಂತರಿಕ ಶಿಸ್ತಿನ ಪ್ರಾಮುಖ್ಯತೆ :

ಸಹಕಾರಿ ಸಂಸ್ಥೆಗಳ ಪರಿಣಾಮಕಾರಿ ಮತ್ತು ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಗೆ, ಕಾನೂನು ಮಾನದಂಡಗಳ ಅನುಸರಣೆಗೆ, ಆರ್ಥಿಕ ಸ್ಥಿರತೆ ಮತ್ತು ಪಾರದರ್ಶಕ ಆಡಳಿತವನ್ನು ಖಚಿತಪಡಿಸಿಕೊಳ್ಳಲು ಆಂತರಿಕ ಶಿಸ್ತು ಅತ್ಯಗತ್ಯ. ಇದು ಸದಸ್ಯರಲ್ಲಿ ವಿಶ್ವಾಸವನ್ನು ಬೆಳೆಸುತ್ತದೆ,

ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ, ದುರುಪಯೋಗವನ್ನು ತಡೆಯುತ್ತದೆ ಮತ್ತು ಸಹಕಾರಿಯ ದೀರ್ಘಕಾಲೀನ ವಿಶ್ವಾಸಾರ್ಹತೆ ಮತ್ತು ಸುಸ್ಥಿರ ಬೆಳವಣಿಗೆಯನ್ನು ಬೆಂಬಲಿಸುತ್ತದೆ. ಸಹಕಾರಿ ಸಂಸ್ಥೆಗಳಲ್ಲಿ ಆಂತರಿಕ ಶಿಸ್ತಿನ ಪ್ರಾಮುಖ್ಯತೆಯು ಈ ಕೆಳಗಿನಂತಿದೆ;

- ಪ್ರಜಾಪ್ರಭುತ್ವ ಹಾಗೂ ಸುಗಮ ಕಾರ್ಯನಿರ್ವಹಣೆಯನ್ನು ಖಚಿತಪಡಿಸುತ್ತದೆ.
- ಕಾನೂನು ಮತ್ತು ನಿಯಂತ್ರಕ ಮಾನದಂಡಗಳ ಅನುಸರಣೆಯನ್ನು ಸುಧಾರಿಸುತ್ತದೆ.
- ಸದಸ್ಯರಲ್ಲಿ ವಿಶ್ವಾಸಾರ್ಹತೆಯನ್ನು ಬಲಪಡಿಸುತ್ತದೆ.
- ಪ್ರಜಾಪ್ರಭುತ್ವ ಮೌಲ್ಯಗಳನ್ನು ರಕ್ಷಿಸುತ್ತದೆ.
- ಸಹಕಾರಿ ಸಂಸ್ಥೆಯ ಸುಸ್ಥಿರತೆ ಮತ್ತು ವಿಶ್ವಾಸಾರ್ಹತೆಯನ್ನು ಖಚಿತಪಡಿಸುತ್ತದೆ.
- ಆರ್ಥಿಕ ಸ್ಥಿರತೆಯನ್ನು ಉತ್ತೇಜಿಸುತ್ತದೆ.
- ಸುಸ್ಥಿರ ಬೆಳವಣಿಗೆಯನ್ನು ಬೆಂಬಲಿಸುತ್ತದೆ.
- ಕಾರ್ಯಕ್ಷಮತೆ, ಉತ್ಪಾದಕತೆ ಮತ್ತು ಸೇವಾ ವಿತರಣೆಯನ್ನು ಹೆಚ್ಚಿಸುತ್ತದೆ.
- ದುರುಪಯೋಗ ನಿರ್ವಹಣೆ ಮತ್ತು ಭ್ರಷ್ಟಾಚಾರವನ್ನು ತಡೆಯುತ್ತದೆ.
- ಸಂಘರ್ಷವನ್ನು ಕಡಿತಗೊಳಿಸುತ್ತದೆ.
- ಸಾಮೂಹಿಕ ಮನೋಭಾವವನ್ನು ಬಲಪಡಿಸುತ್ತದೆ.

**ಸಹಕಾರಿ ಸಂಸ್ಥೆಗಳಲ್ಲಿ ಆಂತರಿಕ ಶಿಸ್ತಿನ ಪರಿಣಾಮಕಾರಿ ನಿರ್ವಹಣೆಯ ಮೂಲಕ ಆಗುವ ಅನುಕೂಲಗಳು :**

ಆಂತರಿಕ ಶಿಸ್ತು ಉತ್ತಮವಾಗಿ ಕಾರ್ಯನಿರ್ವಹಿಸುವ ಸಹಕಾರಿ ಸಂಸ್ಥೆಯ ಬೆನ್ನೆಲುಬಾಗಿದ್ದು, ಆಡಳಿತ ಮತ್ತು ಕಾರ್ಯಾಚರಣೆಗಳ ಎಲ್ಲಾ ಅಂಶಗಳಲ್ಲಿ ನ್ಯಾಯಸಮ್ಮತತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸುತ್ತದೆ. ಪ್ರಜಾಪ್ರಭುತ್ವ ತತ್ವಗಳು, ಬಲವಾದ ನಾಯಕತ್ವ, ಕಾನೂನು ಚೌಕಟ್ಟುಗಳು ಮತ್ತು ತಂತ್ರಜ್ಞಾನದ ಕಾರ್ಯತಂತ್ರದ ಬಳಕೆಗೆ ಬದ್ಧವಾಗಿರುವ ಮೂಲಕ, ಸಹಕಾರಿ ಸಂಸ್ಥೆಗಳು ತಮ್ಮ ನಿರಂತರ ಯಶಸ್ಸಿಗೆ ಅಗತ್ಯವಾದ ನೈತಿಕ ನಡವಳಿಕೆ, ಸದಸ್ಯರ ಭಾಗವಹಿಸುವಿಕೆ ಮತ್ತು ಆರ್ಥಿಕ ಜವಾಬ್ದಾರಿಯ ಸಂಸ್ಕೃತಿಯನ್ನು ಬೆಳೆಸಬಹುದು. ಸಹಕಾರಿ ಸಂಸ್ಥೆಗಳಲ್ಲಿ ಆಂತರಿಕ ಶಿಸ್ತಿನ ಪರಿಣಾಮಕಾರಿ ನಿರ್ವಹಣೆಯ ಮೂಲಕ ಆಗುವ ಅನುಕೂಲಗಳು ಈ ಕೆಳಗಿನಂತಿದೆ;

- **ಪ್ರಜಾಪ್ರಭುತ್ವ ಆಡಳಿತ :** ನಿಯಮಿತ ಚುನಾವಣೆಗಳು, ಸಮಾನ ಮತದಾನದ ಹಕ್ಕುಗಳು ಮತ್ತು ಸಾಮೂಹಿಕ ನಿರ್ಧಾರ ತೆಗೆದುಕೊಳ್ಳುವುದರ ಮೂಲಕ ಸಹಕಾರಿ ಸಂಸ್ಥೆಗಳಲ್ಲಿ ನ್ಯಾಯಸಮ್ಮತತೆ ಮತ್ತು ಶಿಸ್ತನ್ನು ಕಾಪಾಡಿಕೊಳ್ಳಲು ಆಂತರಿಕ ಶಿಸ್ತು ಅತ್ಯಗತ್ಯ.
- **ನಾಯಕತ್ವದ ಬದ್ಧತೆ :** ಪರಿಣಾಮಕಾರಿ, ನೈತಿಕ ಮತ್ತು ಪಾರದರ್ಶಕ ನಾಯಕತ್ವವು ಸದಸ್ಯರು ಮತ್ತು ಸಿಬ್ಬಂದಿಗಳಲ್ಲಿ ಶಿಸ್ತಿನ ಮೇಲೆ ಬಲವಾಗಿ ಪ್ರಭಾವ ಬೀರುತ್ತದೆ.
- **ಹೊಣೆಗಾರಿಕೆ ಮತ್ತು ಪಾರದರ್ಶಕತೆ :** ಮಾಹಿತಿಯ ಮುಕ್ತ ಹಂಚಿಕೆ, ಆರ್ಥಿಕ ಬಹಿರಂಗಪಡಿಸುವಿಕೆ ಮತ್ತು ನಿಯಮಿತ ಲೆಕ್ಕಪ-ರಿಶೋಧನೆಗಳು ನಂಬಿಕೆಯನ್ನು ಬಲಪಡಿಸುತ್ತವೆ ಮತ್ತು ಆರ್ಥಿಕ ದುರುಪಯೋಗವನ್ನು ಕಡಿಮೆ ಮಾಡುತ್ತವೆ.
- **ಕಾನೂನು ಮತ್ತು ನಿಯಂತ್ರಕ ಚೌಕಟ್ಟು :** ಸಹಕಾರಿ ಸಂಸ್ಥೆಗಳ ಸದಸ್ಯರು, ಆಡಳಿತ ಮಂಡಲಿ ಸದಸ್ಯರು ಮತ್ತು ಸಿಬ್ಬಂದಿಗಳು ಸಹಕಾರಿಯ ಉಪವಿಧಿಗಳು ಮತ್ತು ಸಂಬಂಧಿತ ಸಹಕಾರಿ ಶಾಸನಗಳಲ್ಲಿ ವಿವರಿಸಿರುವ ನಿಯಮಗಳೊಳಗೆ ಕಾರ್ಯನಿರ್ವಹಿಸುವುದರೊಂದಿಗೆ, ಸಹಕಾರಿ ಕಾನೂನುಗಳು, ಸಹಕಾರಿಯ ಉಪವಿಧಿಗಳು ಮತ್ತು ಸರ್ಕಾರಿ ಮಾರ್ಗಸೂಚಿಗಳ ಅನುಸರಣೆಯು ಸಹಕಾರಿ ಸಂಸ್ಥೆಗಳನ್ನು ಉತ್ತಮವಾಗಿ ನಡೆಸಲು ಮತ್ತು ವಿವಾದಗಳನ್ನು ಪರಿಹರಿಸಲು ಸಹಾಯ ಮಾಡುತ್ತದೆ.
- **ನಿಯಮಿತ ಸಭೆಗಳು ಮತ್ತು ಆಂತರಿಕ ವಿಮರ್ಶೆಗಳು :** ನಿಯಮಿತ ಸಾಮಾನ್ಯ ಸಭೆ, ಆಡಳಿತ ಮಂಡಲಿ ಸಭೆ ಮತ್ತು ಸಮಿತಿ ಸಭೆಗಳು ನಡೆಸುವುದರ ಮೂಲಕ ಸಂವಾದ, ಕಾರ್ಯಕ್ಷಮತೆ ವಿಮರ್ಶೆಗಳು ಮತ್ತು ಸದಸ್ಯರ ಒಳಗೊಳ್ಳುವಿಕೆಯನ್ನು ಖಚಿತಪಡಿಸುತ್ತವೆ.
- **ಆಂತರಿಕ ನಿಯಂತ್ರಣ ವ್ಯವಸ್ಥೆಗಳು :** ಆಡಿಟ್ ಸಮಿತಿಗಳು, ಪರಿಶೀಲನೆಗಳು ಹಾಗೂ ಡಿಜಿಟಲ್ ಮೇಲ್ವಿಚಾರಣಾ ವ್ಯವಸ್ಥೆಗಳು ಶಿಸ್ತನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಹಾಯ ಮಾಡುತ್ತವೆ.
- **ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ :** ನಿಯಮಿತ ಲೆಕ್ಕಪ-ರಿಶೋಧನೆಗಳು, ಕಾರ್ಯಕ್ಷಮತೆ ವಿಮರ್ಶೆಗಳು ಮತ್ತು ತಪಾಸಣೆಗಳು ನ್ಯೂನ್ಯತೆಗಳನ್ನು/ ಏರುಪೇರುಗಳನ್ನು ಮೊದಲೇ ಗುರುತಿಸಲು ಮತ್ತು ಸರಿಪಡಿಸಲು ಸಹಾಯ ಮಾಡುತ್ತದೆ.
- **ಆರ್ಥಿಕ ಶಿಸ್ತು :** ಸರಿಯಾದ ಬಜೆಟ್, ಜವಾಬ್ದಾರಿಯುತ ಖರ್ಚು, ಸಾಲಗಳ ಸಕಾಲಿಕ ವಸೂಲಾತಿ ಮತ್ತು ನಿಧಿಗಳ ದುರುಪಯೋಗವನ್ನು ತಡೆಗಟ್ಟುತ್ತದೆ.
- **ಆಂತರಿಕ ಆಡಳಿತ :** ಸಹಕಾರಿ ಸಂಸ್ಥೆಗಳಿಗೆ ಸಂಬಂಧಿಸಿದ ಕಡತಗಳ ಸಮರ್ಪಕ ನಿರ್ವಹಣೆ, ಕಡತಗಳ ಸಕಾಲಿಕ ವಿಲೇವಾರಿ, ಸಕಾಲಿಕ ಪತ್ರ ವ್ಯವಹಾರ ನಿರ್ವಹಣೆ, ವಿಭಾಗೀಯ ಕರ್ತವ್ಯಗಳ ಜವಾಬ್ದಾ-ರಿಗಳ ನಿರ್ವಹಣೆ, ಉತ್ತಮ ಸಾರ್ವಜನಿಕ ಸಂಪರ್ಕ, ಗ್ರಾಹಕರ ಸೇವೆಗಳ ವ್ಯವಸ್ಥಿತ ನಿರ್ವಹಣೆಯಂತಹ ಆಂತರಿಕ ಆಡಳಿತ ಮೂಲಕ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.
- **ಸದಸ್ಯರ ಭಾಗವಹಿಸುವಿಕೆ :** ಸಕ್ರಿಯ ಮತ್ತು ಮಾಹಿತಿಯುಕ್ತ ಸದಸ್ಯರ ಭಾಗವಹಿಸುವಿಕೆಯು ಪದಾಧಿಕಾರಿಗಳ ಹೊಣೆಗಾರಿಕೆ ಮತ್ತು ಮೇಲ್ವಿಚಾರಣೆಯನ್ನು ಖಚಿತಪಡಿಸುತ್ತದೆ.
- **ಶಿಕ್ಷಣ ಮತ್ತು ತರಬೇತಿ :** ಸಹಕಾರಿ ಸಂಸ್ಥೆಗಳ ಆಡಳಿತ ಮಂಡಲಿ

ಸದಸ್ಯರು, ಸಿಬ್ಬಂದಿಗಳು ಹಾಗೂ ಸದಸ್ಯರಲ್ಲಿ ತಮ್ಮ ಹಕ್ಕುಗಳು, ಜವಾಬ್ದಾರಿಗಳು ಮತ್ತು ಸಹಕಾರಿ ತತ್ವಗಳ ಅರಿವು ಆಂತರಿಕ ಶಿಸ್ತನ್ನು ಬಲಪಡಿಸುತ್ತದೆ.

- **ಸಿಬ್ಬಂದಿಗಳಲ್ಲಿ ಆಂತರಿಕ ಶಿಸ್ತಿನ ಪಾಲನೆ :** ಸಹಕಾರಿ ಸಂಸ್ಥೆಗಳ ಸಿಬ್ಬಂದಿಗಳಲ್ಲಿ ಆಂತರಿಕ ಶಿಸ್ತಿನ ಅಳವಡಿಕೆಯ ಮೂಲಕ ಕಛೇರಿಯಲ್ಲಿನ ಶಿಷ್ಟಾಚಾರಗಳ ಪಾಲನೆ, ಕಛೇರಿ ವ್ಯವಸ್ಥೆಗಳ ಉತ್ತಮ ನಿರ್ವಹಣೆ, ಆಡಳಿತ ಮಂಡಲಿ ಹಾಗೂ ಮುಖ್ಯಕಾರ್ಯನಿರ್ವಾಹಕರು ಸೇರಿದಂತೆ ಎಲ್ಲಾ ಹಿರಿಯ ಅಧಿಕಾ–ರಿಗಳೊಂದಿಗೆ ಉತ್ತಮ ಸಂಬಂಧ ನಿರ್ವಹಣೆ, ಸಹೋದ್ಯೋಗಿಗಳ ಜೊತೆಗೆ ಉತ್ತಮ ಸಂಬಂಧಗಳ ನಿರ್ವಹಣೆ, ಸಮಯ ಪಾಲನೆ, ವಸ್ತ್ರ ಸಂಹಿತೆ, ಸ್ವಚ್ಛತೆಗೆ ಆದ್ಯತೆ, ವಿನಯದಿಂದ ವರ್ತಿಸುವುದು, ಕಛೇರಿ ಸಮಯ ಹಾಳು ಮಾಡದಿರುವುದು, ಧೂಮಪಾನ ಇತ್ಯಾದಿ ದುಶ್ಚಟಗಳಿಂದ ದೂರವಿರುವುದು, ಕಛೇರಿ ವಸ್ತುಗಳ ಉತ್ತಮ ನಿರ್ವಹಣೆ, ಕಛೇರಿ ಸಮಯದಲ್ಲಿ ಸ್ವಂತ ಕೆಲಸಗಳಿಗೆ ಪ್ರಾಶಸ್ತ್ಯ ನೀಡದಿರುವುದು ಈ ಅಂಶಗಳ ಪಾಲನೆಯಾಗುತ್ತದೆ.
- **ನೀತಿ ಸಂಹಿತೆ ಮತ್ತು ನೈತಿಕ ಅಭ್ಯಾಸಗಳು :** ಸಹಕಾರಿ ಸಂಸ್ಥೆಗಳ ಸದಸ್ಯರು, ಆಡಳಿತ ಮಂಡಲಿ ಸದಸ್ಯರು ಮತ್ತು ಸಿಬ್ಬಂದಿಗಳಲ್ಲಿ ನೈತಿಕ ನಡವಳಿಕೆಯನ್ನು ಮಾರ್ಗದರ್ಶನ ಮಾಡಲು ಸಹಕಾರಿ ಸಂಸ್ಥೆಗಳು ನೀತಿ ಸಂಹಿತೆಗಳನ್ನು ರೂಪಿಸಿಕೊಳ್ಳಲು ಮತ್ತು ಜಾ–ರಿಗೊಳಿಸಲು ಸಹಕಾರಿಯಾಗುತ್ತದೆ.
- **ಶಿಸ್ತಿನ ಕಾರ್ಯವಿಧಾನಗಳು :** ತನಿಖೆ, ದಂಡಗಳು, ಅಮಾನತು ಅಥವಾ ಉಚ್ಚಾಟನೆ ಸೇರಿದಂತೆ ದುಷ್ಕೃತ್ಯವನ್ನು ಎದುರಿಸಲು ಆದೇಶದ ಮೂಲಕ ಶಿಸ್ತಿನ ಕಾರ್ಯವಿಧಾನಗಳನ್ನು ಅನುಸ–ರಿಸುವಂತೆ ಮಾಡುತ್ತದೆ.
- **ತಂತ್ರಜ್ಞಾನದ ಪಾತ್ರ :** ಡಿಜಿಟಲ್ ಪರಿಕರಗಳು, ಹಾಜರಾತಿ ವ್ಯವಸ್ಥೆಗಳು, ಸ್ವಯಂಚಾಲಿತ ದಾಖಲೆ ನಿರ್ವಹಣೆ ಮತ್ತು ಆಡಿಟ್ ಮೂಲಕ ಶಿಸ್ತನ್ನು ಜಾರಿಗೊಳಿಸಲು ಸಹಾಯ ಮಾಡುತ್ತದೆ. ಸಹಕಾರಿ ಸಂಸ್ಥೆಗಳನ್ನು ಸಂಪೂರ್ಣವಾಗಿ ಗಣಕೀಕರಣ ಗೊಳಿಸುವುದರ ಮೂಲಕ ತಂತ್ರಜ್ಞಾನವು ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೇಗೆ ತರಬಹುದು ಎಂಬುದನ್ನು ತೋರಿಸುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ, ಆಂತರಿಕ ಶಿಸ್ತು ಪರಿಣಾಮಕಾರಿ ಮತ್ತು ಸುಸ್ಥಿರ ಸಹಕಾರಿ ಸಂಸ್ಥೆಯ ಬೆನ್ನೆಲುಬಾಗಿದೆ. ಸಹಕಾರಿ ಸಂಸ್ಥೆಗಳಲ್ಲಿ ಪರಿಣಾಮಕಾರಿ, ಪಾರದರ್ಶಕ ಮತ್ತು ಪ್ರಜಾಪ್ರಭುತ್ವದ ಕಾರ್ಯನಿರ್ವಹಣೆಗೆ ಆಂತರಿಕ ಶಿಸ್ತು ಮೂಲಾಧಾರವಾಗಿದೆ. ಇದು ಕಾನೂನುಗಳು ಮತ್ತು ತತ್ವಗಳ ಅನುಸರಣೆಯನ್ನು ಖಚಿತಪಡಿಸುತ್ತದೆ, ಸದಸ್ಯರಲ್ಲಿ ವಿಶ್ವಾಸವನ್ನು ಬೆಳೆಸುತ್ತದೆ ಮತ್ತು ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸುತ್ತದೆ. ನೈತಿಕ ನಡವಳಿಕೆ, ಆರ್ಥಿಕ ಹೊಣೆಗಾರಿಕೆ ಮತ್ತು ಸದಸ್ಯರ ಭಾಗವಹಿಸುವಿಕೆಯನ್ನು ಎತ್ತಿಹಿಡಿಯುವ ಮೂಲಕ, ಸಹಕಾರಿ ಸಂಸ್ಥೆಗಳು ಸುಸ್ಥಿರ ಬೆಳವಣಿಗೆ ಮತ್ತು ವಿಶ್ವಾಸಾರ್ಹತೆಯನ್ನು ಸಾಧಿಸಬಹುದು. ಆಂತರಿಕ ಶಿಸ್ತಿಗೆ ಆದ್ಯತೆ ನೀಡುವ ಸಹಕಾರಿ ಸಂಸ್ಥೆಗಳು ಸವಾಲುಗಳನ್ನು ಎದುರಿಸಲು, ಬದಲಾವಣೆಗೆ ಹೊಂದಿಕೊಳ್ಳಲು ಮತ್ತು ತಮ್ಮ ಸದಸ್ಯರ ಸಾಮೂಹಿಕ ಹಿತಾಸಕ್ತಿಗಳನ್ನು ಪಾರದರ್ಶಕ ಮತ್ತು ಪರಿಣಾಮಕಾರಿ ರೀತಿಯಲ್ಲಿ ಪೂರೈಸಲು ಉತ್ತಮವಾಗಿ ಸಜ್ಜಾಗಿರುತ್ತವೆ. ಆದ್ದರಿಂದ, ಸಹಕಾರಿ ಸಂಸ್ಥೆಗಳ ದೀರ್ಘಕಾಲೀನ ಯಶಸ್ಸು ಮತ್ತು ಸಮಗ್ರತೆಗೆ ಬಲವಾದ ಆಂತರಿಕ ಶಿಸ್ತಿನ ಚೌಕಟ್ಟು ಅತ್ಯಗತ್ಯ.

## ಸೌಹಾರ್ದ ಅಭಿವೃದ್ಧಿ ಅಧಿಕಾರಿಯಿಂದ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಭಾಗಿ

**ಉಡುಪಿ :** ದಿನಾಂಕ : 18.05.25ರಂದು ಉಡುಪಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವಿಜಯ್ ಬಿ.ಎಸ್ ರವರು ಕುಡುಬಿ ಸಮಾಜ ಸೌಹಾರ್ದ ಸಹಕಾರಿ ನಿ., ಸದರಿ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಕರ್ತವ್ಯಗಳು, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಹಾಗೂ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಲಾಯಿತು.


**ಉಡುಪಿ :** ದಿನಾಂಕ : 21.05.2025ರಂದು ಉಡುಪಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವಿಜಯ್ ಬಿ.ಎಸ್ ರವರು ಉಡುಪಿ ಗ್ಯಾರೇಜ್ ಮಾಲಕರ ಮತ್ತು ಕಾರ್ಮಿಕರ ಸೌಹಾರ್ದ ಸಹಕಾರಿ ಸಂಘ ನಿ., ಸದರಿ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಕರ್ತವ್ಯಗಳು, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿ–ಕೆಗಳ ಕುರಿತು ಹಾಗೂ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಲಾಯಿತು.

**ದಕ್ಷಿಣ ಕನ್ನಡ :** ದಿನಾಂಕ : 27.05.2025ರ ಮಂಗಳವಾರದಂದು ಪುತ್ತೂರಿನ ಬಿಎಂಎಸ್ ಆಟೋ ರಿಕ್ಷಾ ಚಾಲಕರ ಮಾಲೀಕರ ಸೌಹಾರ್ದ ಸಹಕಾರಿ ನಿ., (ಎಂಎನ್‌ಜಿ–0085) ಸದರ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಯಾದ ಶ್ರೀ ವಿಜಯ್ ಬಿ.ಎಸ್ ಹಾಗೂ ನಂದನ್ ಬಿ.ಎನ್ ದಕ್ಷಿಣಕನ್ನಡ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರುಗಳು ಭಾಗವಹಿಸಿ ನಿರ್ದೇಶಕರ ಹಕ್ಕುಗಳು, ಕರ್ತವ್ಯಗಳು ಮತ್ತು ಸಾಲ ವಸೂಲಾತಿಯ ಮತ್ತು ಸೌಹಾರ್ದ ಕಾಯ್ದೆ ಮತ್ತು ಉಪವಿಧಿಗಳ ಕುರಿತಂತೆ ಅಗತ್ಯ ಮಾಹಿತಿಯನ್ನು ಆಡಳಿತ ಮಂಡಳಿ ಸದಸ್ಯರಿಗೆ ನೀಡಿದರು.

**ಉಡುಪಿ :** ದಿನಾಂಕ 24.05.2025 ರಂದು ಸಂಯುಕ್ತ ಸಹಕಾರಿ ಆರ್ಥಿಕ ಸಭಲತೆಯ ಮಾನದಂಡಗಳ ಪ್ರಕಾರ ಐ ವರ್ಗದ ತೀವ್ರನಿಗಾ ಸೌಹಾರ್ದ ಸಹಕಾರಿಯಾದ ಧನಶ್ರೀ ಸೌಹಾರ್ದ ಸಹಕಾರಿ ನಿ ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಸಹಕಾರಿಯ ಆರ್ಥಿಕ ಚಟುವಟಿಕೆ, ಸಾಲ ವಸೂಲಾತಿ, ಸುಸ್ತಿ ಸಾಲ ವಸೂಲಾತಿಗೆ ಕೈಗೊಳ್ಳಬೇಕಾದ ಕ್ರಮಗಳು ಮತ್ತು ದಾವಾ ದಾಖಲಾತಿಗೆ ಅಗತ್ಯ ದಾಖಲೆಗಳು ಮತ್ತು ನಿರ್ದೇಶಕರ ಕರ್ತವ್ಯಗಳ ಕುರಿತು ಮಾಹಿತಿ ನೀಡಲಾಯಿತು.

# ಅಂತರರಾಷ್ಟ್ರೀಯ ಯೋಗ ದಿನ- 'Yoga for One Earth, One Health

– ಶ್ರೀಮತಿ ಸುನೀತ ಎಸ್. ಕೊಡ್ಲೇರ್ ಉಪಾಧ್ಯಕ್ಷರು, ಪ್ರಗತಿ ಮಹಿಳಾ ಸಹಕಾರಿ ಸಂಘ ನಿ., ಹಿರೇಕೇರೂರು




ಪ್ರತಿಯೊಬ್ಬನ ಜೀವನದಲ್ಲಿ ಆರೋಗ್ಯ ಮತ್ತು ಶಾಂತಿ ಬಹಳ ಮುಖ್ಯವಾದ ಅಂಶಗಳು. ಮಾನಸಿಕ ಮತ್ತು ದೈಹಿಕ ಸಮತೋಲನವು ಸಮೃದ್ಧ ಜೀವನಕ್ಕೆ ಅಗತ್ಯವಾಗಿರುತ್ತದೆ. ಈ ಸಮತೋಲನವನ್ನು ಸಾಧಿಸಲು ಯೋಗ ಅತ್ಯಂತ ಪ್ರಬಲ ಸಾಧನವಾಗಿದೆ. ಯೋಗವು ಪುರಾತನ ಭಾರತೀಯ ಪಾರಂಪರಿಕ ವೈದಿಕ ಪರಂಪರೆಯಿಂದ ಬಂದ ದೈಹಿಕ ಹಾಗೂ ಆಧ್ಯಾತ್ಮಿಕ ಅಭ್ಯಾಸವಾಗಿದೆ. ಈ ಮಹತ್ವವನ್ನು ಅರಿತು, ಜೂನ್ 21ನೇ ತಾರೀಖನ್ನು ಅಂತಾರಾಷ್ಟ್ರೀಯ ಯೋಗ ದಿನವೆಂದು ಆಚರಿಸಲಾಗುತ್ತಿದೆ.

ಯೋಗವು ಭಾರತದಿಂದ ಜನ್ಮತಾಳಿರುವುದು ನಮಗೆಲ್ಲ ತಿಳಿದ ವಿಷಯ. ಆದರೆ ಇಂದಿಗೆ ಜಗತ್ತೆಲ್ಲ ಒಪ್ಪಿಕೊಂಡಿರುವ ಆರೋಗ್ಯ ಪೂರ್ಣ ಜೀವನದ ಮಾರ್ಗವಾಗಿದೆ. ಪ್ರತಿವರ್ಷ ಜೂನ್ 21ರಂದು ಆಚರಿಸುತ್ತಿರುವ ಅಂತಾರಾಷ್ಟ್ರೀಯ ಯೋಗ ದಿನ, 2025ರಲ್ಲಿ "Yoga for One Earth, One Health" ಎಂಬ ಥೀಮ್‌ನೊಂದಿಗೆ ವಿಶ್ವಾದ್ಯಂತ ಜಾಗೃತಿ ಮೂಡಿಸುತ್ತಿದೆ. ಈ ಥೀಮ್ ಯೋಗವನ್ನು ಕೇವಲ ವ್ಯಕ್ತಿಗತ ಶ್ರೇಯಸ್ಸಿಗಲ್ಲ, ಸಂಪೂರ್ಣ ಭೂಮಿಗೆ ಮತ್ತು ಜೀವಜಾಲಕ್ಕೂ ಸಂಬಂಧಿಸಿದ ದಾರಿಯಾಗಿ ಪ್ರತಿಪಾದಿಸುತ್ತದೆ.

## "Yoga for One Earth, One Health" ಥೀಮ್‌ನ ಅರ್ಥ:

"Yoga for One Earth, One Health" ಅಂದರೆ – ಯೋಗದ ಮೂಲಕ ಮನುಷ್ಯ ತನ್ನ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ಜೊತೆಗೆ, ಪ್ರಕೃತಿಯೊಂದಿಗೆ ಸಹಜ ಸಮತೋಲನ ಸಾಧಿಸಿ, ಭೂಮಿಯ ಆರೋಗ್ಯಕ್ಕೂ ಕೊಡುಗೆ ನೀಡಬೇಕು. ಈ ಕಲ್ಪನೆಯು ವೈಶ್ವಿಕ ಆರೋಗ್ಯದ ದೃಷ್ಟಿಕೋನದಿಂದ ಬಹಳ ಪ್ರಾಸಂಗಿಕವಾಗಿದೆ.

## ಯೋಗ ಎಂದರೇನು?

'ಯೋಗ' ಎಂಬ ಪದವು ಸಂಸ್ಕೃತದ "ಯುಜ್" ಎಂಬ ಧಾತುದಿಂದ ಬಂದಿದೆ. ಇದರ ಅರ್ಥ "ಒಗ್ಗೂಡುವುದು", ಅಥವಾ "ಏಕತೆಯನ್ನು ಸಾಧಿಸುವುದು". ಯೋಗವು ದೇಹ, ಮನಸ್ಸು ಮತ್ತು ಆತ್ಮದ ಒಗ್ಗೂಡುವಿಕೆಯನ್ನು ಪ್ರತಿನಿಧಿಸುತ್ತದೆ. ಯೋಗವು ಕೇವಲ ಶಾರೀರಿಕ ವ್ಯಾಯಾಮವಲ್ಲ, ಇದು ಮಾನಸಿಕ ಶಾಂತಿ, ಆತ್ಮಸಾಧನೆ, ಆರೋಗ್ಯ ಮತ್ತು ಆಂತರಿಕ ಶಕ್ತಿ ಅಭಿವೃದ್ಧಿಗೆ ಸಹಾಯಕವಾಗಿದೆ. ಯೋಗವು ಸರಳತೆ, ಸ್ವಚ್ಛತೆ ಮತ್ತು ಸಮತೋಲನದ ಜೀವನಶೈಲಿಯನ್ನು ಪ್ರೋತ್ಸಾಹಿಸುತ್ತದೆ. ಇದು ಪ್ರಾಕೃತಿಕ ಸಂಪತ್ತುಗಳನ್ನು ಉಳಿಸಲು ಸಹಾಯ ಮಾಡುತ್ತದೆ. ಯೋಗ ಅನುಷ್ಠಾನ ಮಾಡುವವರು ಸಾಮಾನ್ಯವಾಗಿ ಆಹಾರ, ನಿದ್ರೆ, ಪ್ರಕ್ರತಿಯ ಜೊತೆಗಿನ ಸಂಬಂಧ ಇತ್ಯಾದಿಯಲ್ಲಿ ಹೆಚ್ಚು ಅರಿವು ಹೊಂದಿರುತ್ತಾರೆ. ಇದರಿಂದ ಪರಿಸರ ಸ್ನೇಹಿ ಜೀವನಶೈಲಿಗೆ ಪ್ರೇರಣೆ ದೊರಕುತ್ತದೆ.

## ವಿಶ್ವ ಯೋಗ ದಿನದ ಹುಟ್ಟು :

ವಿಶ್ವ ಯೋಗ ದಿನದ ಆಲೋಚನೆಯನ್ನು ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2014ರ ಸೆಪ್ಟೆಂಬರ್‌ನಲ್ಲಿ ಸಂಯುಕ್ತ ರಾಷ್ಟ್ರಗಳ ಸಂಘಟನೆಯ ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪಿಸಿದರು. ಅವರು ಯೋಗದ ಮಹತ್ವವನ್ನು ವಿವರಿಸಿ, ಇದರ ಜಾಗತಿಕ ಆಚರಣೆಯ ಅಗತ್ಯತೆಯನ್ನು ಉಲ್ಲೇಖಿಸಿದರು. ಈ ಪ್ರಸ್ತಾವನೆಗೆ 177 ದೇಶಗಳ ಬೆಂಬಲ ದೊರೆಯಿತು ಮತ್ತು 2015ರ ಜೂನ್ 21ರಂದು ಮೊದಲ ವಿಶ್ವ ಯೋಗ ದಿನವನ್ನು ವಿಶ್ವಾದ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು.

## ಜೂನ್ 21ರ ಆಯ್ಕೆ ಮಹತ್ವ:

ಜೂನ್ 21ರಂದು ಉತ್ತರಗೋಳದಲ್ಲಿ ಅತ್ಯಂತ ದೀರ್ಘವಾದ ದಿನವಾಗಿರುತ್ತದೆ – ಇದನ್ನು "Summer Solstice" ಎನ್ನುತ್ತಾರೆ. ಭಾರತೀಯ ಸಂಪ್ರದಾಯದಲ್ಲಿ ಈ ದಿನ ಆಧ್ಯಾತ್ಮಿಕ ಮಹತ್ವ ಹೊಂದಿದ್ದು, ಗುರುಪೂರ್ಣಿಮೆಗೆ ತಯಾರಿ ಆರಂಭವಾಗುವ ದಿನವೆಂದು ಪರಿಗಣಿಸಲಾಗುತ್ತದೆ. ಹೀಗಾಗಿ ಈ ದಿನವನ್ನು ಯೋಗದ ದಿನವನ್ನಾಗಿ ಆಯ್ಕೆ ಮಾಡಲಾಗಿದೆ.

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 32
Licensed to post without Prepayment License No. PMG BG/WPP-384/2023-2025.

**ಯೋಗ ಮತ್ತು COVID-19 ಅನುಭವ:**

ಕೊರೋನಾ ಮಹಾಮಾರಿಯ ಸಂದರ್ಭ ಯೋಗದ ಮಹತ್ವವು ಜಗತ್ತಿಗೆ ಹೆಚ್ಚು ಸ್ಪಷ್ಟವಾಯಿತು. ಮನೆ ಮನೆಗಳಲ್ಲಿ ಯೋಗ ಅಭ್ಯಾಸವು ಆರೋಗ್ಯ ಕಾಪಾಡಲು ನಂಬಿಕಸ್ತರಾಗಿತ್ತು. 2020–2022ರ ನಡುವೆ ಯೋಗವು ಪ್ರಾಥಮಿಕ ಆರೋಗ್ಯ ಸಂರಕ್ಷಕವಾಗಿ ಕಾರ್ಯನಿರ್ವಹಿಸಿತು.

**ಯೋಗದ ಉಪಯೋಗಗಳು:**

**ಶಾರೀರಿಕ ಆರೋಗ್ಯ:** ಯೋಗವು ಮನುಷ್ಯನ ದೇಹವನ್ನು ದೃಢಗೊಳಿಸುತ್ತದೆ. ಅದರಲ್ಲೂ ಪ್ರಾಣಾಯಾಮ, ಅಸನಗಳು ಮತ್ತು ಧ್ಯಾನದ ಅಭ್ಯಾಸ ದೇಹದ ವಿವಿಧ ಅಂಗಾಂಗಗಳಿಗೆ ಉತ್ತಮ ವ್ಯಾಯಾಮವನ್ನು ನೀಡುತ್ತದೆ.

**ಮಾನಸಿಕ ಶಾಂತಿ:** ಧ್ಯಾನ ಮತ್ತು ಶ್ವಾಸ ವ್ಯಾಯಾಮಗಳು ಒತ್ತಡ ನಿವಾರಣೆ, ಆತಂಕ ಹತೋಟಿ ಮತ್ತು ಮನಸ್ಸಿನ ಏಕಾಗ್ರತೆಯಲ್ಲಿ ಸಹಾಯ ಮಾಡುತ್ತವೆ.

**ಆಧ್ಯಾತ್ಮಿಕ ಬೆಳವಣಿಗೆ:** ಯೋಗವು ಆತ್ಮತೃಪ್ತಿ, ಸಂಯಮ, ಸಹಿಷ್ಣುತೆ ಮತ್ತು ಆಂತರಿಕ ಶಕ್ತಿಯ ಬೆಳವಣಿಗೆಗೆ ದಾರಿ ಮಾಡಿಕೊಡುತ್ತದೆ.

**ಆಧುನಿಕ ಜೀವನದಲ್ಲಿ ಯೋಗ:** ಇತ್ತೀಚಿನ ಜೀವನಶೈಲಿಯಲ್ಲಿನ ಒತ್ತಡ, ಕಳೆಯುತ್ತಿರುವ ನಿದ್ರೆ, ಅರೆಹೊತ್ತಾದ ಆಹಾರ ಇತ್ಯಾದಿಗಳಿಂದ ಮನುಷ್ಯ ಅನೇಕ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾನೆ. ಇವುಗಳ ಪರಿಹಾರಕ್ಕೆ ಯೋಗ ಅತ್ಯುತ್ತಮ ಪರಿಹಾರವಾಗಿದೆ.

**ವಿಶ್ವಾದ್ಯಂತದ ಆಚರಣೆ:**

ವಿಶ್ವದ ಹಲವಾರು ದೇಶಗಳಲ್ಲಿ ಈ ದಿನವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಭಾರತದಲ್ಲಿ ರಾಮ್ಮಣ ಮಹೋತ್ಸವದಂತೆಯೇ ಯೋಗ ದಿನವೂ ಮಹತ್ವ ಪಡೆದುಕೊಂಡಿದೆ. ಶಾಲಾ ಕಾಲೇಜುಗಳಲ್ಲಿ, ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ, ಯೋಗ ಶಿಬಿರಗಳು, ಸಾಮೂಹಿಕ ಯೋಗ ಅಭ್ಯಾಸಗಳು, ಜಾಗೃತಿ ಕಾರ್ಯಕ್ರಮಗಳು ನಡೆಯುತ್ತವೆ. ಪ್ರಧಾನಮಂತ್ರಿ ಅವರೂ ಈ ದಿನ ಸಾರ್ವಜನಿಕವಾಗಿ ಯೋಗ ಅಭ್ಯಾಸದಲ್ಲಿ ಪಾಲ್ಗೊಳ್ಳುತ್ತಾರೆ.

**ಯೋಗ ಮತ್ತು ಯುವಪೀಳಿಗೆ:**

ಇಂದಿನ ಯುವ ಸಮುದಾಯ ಒತ್ತಡ, ಸ್ಪರ್ಧೆ ಮತ್ತು ಕಲಿಕೆಯಲ್ಲಿ ತೀವ್ರ ಮನಃಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಯೋಗವು ಅವರಿಗೆ ಆತ್ಮವಿಶ್ವಾಸ, ಏಕಾಗ್ರತೆ, ಮನಸ್ಸಿನ ಸ್ಥೈರ್ಯವನ್ನು ನೀಡುತ್ತದೆ. ಇದು ನೈತಿಕ ಮೌಲ್ಯಗಳನ್ನೂ ಒದಗಿಸುತ್ತದೆ.

**ನಿರ್ಣಯ:**

ವಿಶ್ವ ಯೋಗ ದಿನ ಕೇವಲ ಒಂದು ಆಚರಣೆಯ ದಿನವಲ್ಲ; ಇದು ಪ್ರತಿಯೊಬ್ಬ ಮನುಷ್ಯ ತನ್ನ ದೈನಂದಿನ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಂಡು ಆರೋಗ್ಯಪೂರ್ಣ, ಶಾಂತಿಯುತ ಮತ್ತು ಸಮತೋಲನಯುತ ಬದುಕು ನಡೆಸುವ ಪ್ರೇರಣೆಯ ದಿನವಾಗಿದೆ. ಯೋಗದ ಮಾರ್ಗವನ್ನು ಪ್ರತಿದಿನವೂ ಅನುಸರಿಸುವುದು ಮಾತ್ರ ಉತ್ತಮ ಆರೋಗ್ಯ ಮತ್ತು ಮಾನಸಿಕ ಶಾಂತಿಗೆ ದಾರಿ ಮಾಡಿಕೊಡುತ್ತದೆ. ನಾವು ಈ ದಿನವನ್ನು ಉಪಯೋಗಿಸಿಕೊಂಡು ಯೋಗದ ಮಹತ್ವವನ್ನು ಅನವರತವಾಗಿ ಪಾಲಿಸೋಣ.

2025ರ ಅಂತಾರಾಷ್ಟ್ರೀಯ ಯೋಗ ದಿನದ ಥೀಮ್ ನಮಗೆ ಯೋಗವನ್ನು ಹೊಸ ದೃಷ್ಟಿಕೋನದಿಂದ ನೋಡುವ ಅವಕಾಶ ನೀಡುತ್ತದೆ. ಇದು ನಾವು ಸ್ವಯಂ ಆರೋಗ್ಯಪೂರ್ಣವಾಗಿರುವುದರ ಜೊತೆಗೆ, ಭೂಮಿಯ ಆರೋಗ್ಯಕ್ಕೂ ಜವಾಬ್ದಾರರಾಗಿ ನಡೆದುಕೊಳ್ಳಬೇಕೆಂಬ ಸಂದೇಶ ನೀಡುತ್ತದೆ. ನಾವು ಪ್ರತಿದಿನ ಯೋಗದ ಕೆಲವು ನಿಮಿಷಗಳನ್ನು ಮೀಸಲಾಗಿಟ್ಟರೆ, ಅದು ನಮ್ಮ ಆರೋಗ್ಯದ ಮಾತ್ರವಲ್ಲದೆ, ಪರಿಸರದ ಸಮತೋಲನಕ್ಕೂ ದೊಡ್ಡ ಕೊಡುಗೆ ನೀಡಿದಂತಾಗುತ್ತದೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34
ಇ–ಸ್ಟ್ಯಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟ್ಯಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003